ನಿರ್ಣಯದ ಮೇಲೆ ವಿಪುಲವಾಗಿ ಚರ್ಚೆಯಾಗಿದೆಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದುವರೆಗೆ ಆಗಿರುವ ಚರ್ಚೆಯನ್ನು ನೋಡಿದರೆ ಕೇವಲ ಎಂಟು ಅಥವಾ ಒಂಭತ್ತು ಜನ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ; ಇನ್ನೂ ಅನೇಕ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿಬೇಕಾಗಿದೆ. ಈ ನಿರ್ಣಯದ ಸಲುವಾಗಿ ಭಾಗವಹಿಸುವವರಿಗೆ ಅವಕಾಶವಿಲ್ಲದಂತೆ ತಡೆಹಾಕುವುದು ಸರಿಯಾದುದಲ್ಲ. ಈ ಎಲ್ಲಾ ಕಾರಣಗಳಿಂದ ಶ್ರೀಮಾನ್ ರಾಮಪ್ಪನವರು ತಂದಿರತಕ್ಕ ನಿರ್ಣಯದ ಚರ್ಚೆಯನ್ನು ಮುಂದುವರಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The question is :

"That the debate on the Hon'ble Member Sri M. Ramappa's Resolution for changing the name of 'Mysore' to 'Karnataka State' be adjourned *sine die.*"

The motion was adopted.

Mr. SPEAKER.—Before we go to the next item, I would like to announce one thing. Some time back, Hon'ble Members will remember, I gave a ruling on the point of the resolution that was moved by Sri M. Ramappa. It was to the effect that the resolution subsisted. I made a reference to the Lok Sabha as to whether my ruling was correct or not, and I have got the letter from the Lok Sabha : I shall read out an extract from the letter.

"As regards your second point, rule 336 of the Lok Sabha Rules provides . . . . ."

Of course, our rule is the same. The numbering is different.

"...... provides that 'a motion, resolution or an amendment, which has been moved and is pending in the House, shall not lapse by reason only of the prorogation of the House .'..."

Our rule is 17. Their rule is 36.

"...In the Lok Sabha, therefore, when a member has moved a resolution but not concluded his speech and the session is prorogued, his resolution is not deemed to hhve lapsed and is put down as the first item under the proviso to rule 29 on the next day allotted for that class of business in the next session. In a recent case on the 4th September, 1959, which was the last day allotted for Private Members' Resolutions during the 8th Session of Lok Sabha, Shri Prakash Vir Shastri moved a resolution for holding a session of Lok Sabha at Hyderabad or Bangalore every year but his speech on it was not concluded on that day. This resolution was put down as the first item in the List of Business for Private Members' Resolutions on the 20th November, 1959, which was the first day allotted for Private Members' Resolution during the following (9th) session, notwithstanding the fact that the President had prorogued the Lok Sabha on the 15th September, 1959."

The Honourable Members will realise that the ruling that I gave was quite correct.

Sri A. V. NARASIMHA REDDY (Bangalore South).—If I followed it correctly about the letter that you have just now read to the House, there it is said that if the mover of a resolution has not concluded his speech, then that question be held over to the next session. That is the ruling if I have understood correctly.

Mr. SPEAKER.—When Sri Ramappa moved the resolution and had not concluded the speech, I made a reference to the Lok Sabha. This reply came on my reference after what happened here. There are also other rulings to that effect.

NON-OFFICIAL RESOLUTIONS

re. Implementation of Malaprabha Project.

Sri R. M. PATIL (Navalgund).—Sir, I move :

"That this Assembly is of opinion that in order to prevent constantly recurring famine conditions in Dharwar District, particularly in Navalgund,

(SRI R. M. PATIL)

Nargund and Soundatti areas, the Government should forthwith take up the implementation of the Malaprabha Project at Naviltirtha without waiting for its being included in the Third Five-Year Plan.''

MR. SPEAKER.—Motion moved :

''That this Assembly is of opinion that in order to prevent constantly recurring famine conditions in Dharwar District, particularly in Navalgund, Nargund and Soundatti areas, the Government should forthwith take up the implementation of the Malaprabha Project at Naviltirtha without waiting for its being included in the Third Five-Year Plan.''

5 P.M.

SRI A. J. DODDAMETI (Ron).—Sir, I beg to move the following amendment:

''That in line 3 after the word 'Nargund' add the word 'Ron'.

MR. SPEAKER.—Amendment moved :

''That in line 3 after the word 'Nargund' add the word 'Ron'

ಶ್ರೀ ಆರ್. ಎಂ. ಪಾಟೀಲ್ (ನವಲಗುಂದ್).—ಸಭಾಧ್ಯಕ್ಷರೇ, ಈಗ ಈ ನಿರ್ಣಯವನ್ನು ಈ ಸಭೆಯ ಮುಂದೆ ತರುವಂಥ ಪ್ರಸಂಗ ಬಂದಿದೆ. ಏಕೆಂದರೆ ಧಾರವಾಡ ಜಿಲ್ಲೆಯಲ್ಲಿ, ಹಾಗೂ ಬೆಳಗಾಂ ಜಿಲ್ಲೆಯಲ್ಲಿ ಅತ್ಯುತ್ತಮ ಬೆಳೆಯುಳ್ಳ ಪ್ರದೇಶಗಳಾದ ನರಗುಂದ್, ನವಲ್‌ಗುಂದ್, ರೋಣ, ಹೂಬ್ಲಿ, ಗದಗ್, ಸೌಂದತ್ತಿ ಮುಂತಾದ ಪ್ರಧಾನಸ್ಥಳಗಳಲ್ಲಿ ಮೇಲಿಂದ ಮೇಲೆ ಮಳೆಯಾಗದಿದ್ದುದಕ್ಕಾಗಿ ಯಾವಾಗಲೂ ಆ ಪ್ರದೇಶಗಳ ಭೂಮಿ ದುಷ್ಕಾಲ ಭೂಮಿ ಎಂದೆನ್ನಿಸಿಕೊಂಡಿದೆ. ಕಳೆದ 20 ವರ್ಷಗಳಲ್ಲಿ ಸ್ವಾಭಾವಿಕವಾಗಿ ನಾವು ಯಾವ ಯಾವ ವರ್ಷಗಳಲ್ಲಿ ಈ ಕಂದಾಯ ವಸೂಲಿ ಮುಂದೆ ಹಾಕಲಿದೆಯೋ ಅಥವಾ ಸಂಪೂರ್ಣವಾಗಿ ವಸೂಲಾಗಿದೆಯೋ ಮತ್ತು ಬಿಡಲಾಗಿದೆಯೋ ಇವುಗಳ ನಿರೀಕ್ಷಣೆ ಮಾಡಿದಲ್ಲಿ ನನ್ನ ತಿಳುವಳಿಕೆ ಪ್ರಕಾರ ಈ ಪ್ರಾಜೆಕ್ಟ್ ಕಟ್ಟುವುದಕ್ಕೆ ಏನು ಖರ್ಚು ಬರುತ್ತದೋ ಅದನ್ನು 20ವರ್ಷಗಳ ಅವಧಿಯಲ್ಲಿ ಸರಿದೂಗಿಸಬಹುದೆಂದು ನಾನು ಹೇಳುತ್ತೇನೆ. ಎಷ್ಟು ಜನರಿಗೆ ಎಷ್ಟರಮಟ್ಟಿಗೆ ದುರ್ಭಿಕ್ಷಕಾಲದಲ್ಲಿ ಕಷ್ಟವಾಗುತ್ತದೆ ಎಂಬುದನ್ನು ವಿಚಾರ ಮಾಡುವ ಕಾಲ ಇದು. ಎಷ್ಟೋ ಹಕ್ಕಿಗಳು ಮರದಿಂದ ಮರಕ್ಕೆ ಯಾವ ರೀತಿ ಹಾರಿಹೋಗುತ್ತವೋ ಆ ರೀತಿ ಈ ಕಷ್ಟಸ್ಥಿತಿಯಲ್ಲಿ ಯಾವ ಒಂದು ಬೆಳೆಯನ್ನೂ ಬೆಳೆಯದೇ ಅನೇಕರು ಓಡಿ ಹೋಗುತ್ತಿದ್ದಾರೆ. ಇದರಿಂದ ಬಡವರಿಗೆ, ಹಾಗೂ ಮಧ್ಯಮವರ್ಗದವರಿಗೆ ಬಹಳ ತೊಂದರೆಯಾಗಿದೆ. ತಮ್ಮ ಮನೆತನಗಳನ್ನು ಬಿಟ್ಟು ಹೋಗುವಂತಹ ಪ್ರಸಂಗ ಮೇಲಿಂದ ಮೇಲೆ ಬರುತ್ತದೆ. ನಾವು ಈಗ ಯಾವ ಸಮಾಜದ ಆರ್ಥಿಕ ಸಮೃದ್ಧಿಯಾಗಿ ಇರಬೇಕೆಂದು ನಿರ್ಧರಿಸಿರುವಾಗ ಮುಖ್ಯವಾಗಿ ಬೇಕಾದಂತಹುಗಳು, ಮೂರು. ಅನ್ನ, ವಸ್ತ್ರ, ಮತ್ತು ಮನೆ. ಇವು ಮೂರು ಈ ಭಾಗದಲ್ಲಿ ಯಾವಾಗಲಾದರೂ ಲಭಿಸಬಹುದು. ಅಥವಾ ಇದ್ದುದನ್ನು ಕಳೆದುಕೊಂಡು ಹೋಗುವ ಪ್ರಸಂಗಗಳೂ ಇವೆ. ಇಂತಹ ಸಂದರ್ಭದಲ್ಲಿ ಮುಖ್ಯವಾಗಿ ಬೇಕಾದ್ದು ಒಂದೇ ಒಂದು ಉಪಾಯ ಅಂದರೆ ಮಲಪ್ರಭಾ ಯೋಜನೆಯ ವಿಷಯ. ಇದನ್ನು ಕಂಡುಹಿಡಿದದ್ದು 1908 ರಲ್ಲಿ. ಮುಂಬೈ ಸರ್ಕಾರದವರು ಈ ಒಂದು ಯೋಜನೆಯನ್ನು ಮಾಡಿದರು. ಆ ಕಾಲಕ್ಕೆ ಅದು ಸಾಕಷ್ಟು ಇಕನಾಮಿಕ್ ಅಂದರೆ ಆರ್ಥಿಕ ದೃಷ್ಟಿಯಿಂದ ಸರಿಯಾಗಿ ಆಗುವುದಿಲ್ಲವೆಂಬ ಭಾವನೆಯಿಂದ ಅದನ್ನು ಮುಂದೆ ಹಾಕಲಾಯಿತು. ನಂತರ 1954 ರಲ್ಲಿಯೂ ಸಹ ಈ ಪ್ರಾಜೆಕ್ಟನ್ನು ಮುಂಬೈ ಸರ್ಕಾರದವರು ಪುನಃ ತೆಗೆದುಕೊಂಡು ಅದನ್ನು ಸರ್ವೆಮಾಡಿ, ಅದರಂತೆ ಇನ್ನೂ ಮುಂದೆ ಹೋಗಬೇಕು ಎನ್ನುವ ವಿಚಾರದಿಂದ ಪುನಃ ಅದನ್ನು ರಿ-ಸರ್ವೆಮಾಡಿಸಿದರು. ಅದೇ ಪ್ರಕಾರ ಈ ಯೋಜನೆಯನ್ನು ಕೈಗೊಳ್ಳತಕ್ಕದ್ದು ಎಂದು ಹೇಳಿದಮೇಲೆ ವಿಶೇಷವಾಗಿ ಎರಡು ಸ್ಥಳಗಳಲ್ಲಿ ಈ ಪ್ರಾಜೆಕ್ಟನ್ನು ನೆರವೇರಿಸಬೇಕೆನ್ನುವ ವಿಚಾರ ಬಂತು. ಮೊದಲನೆಯದು ಖಾನಾಪುರ ತಾಲ್ಲೂಕ್ ಎರಡನೆಯದು ನವಿಲು ತೀರ್ಥಬಳಿ ಅಂದರೆ ಸೌಂದತ್ತಿ ತಾಲ್ಲೂಕ್‌ನಲ್ಲಿ. ಈ ಮೊದಲನೆಯ ಯೋಜನೆ ಸ್ವಲ್ಪ ಹೆಚ್ಚು ಖರ್ಚು ಇದ್ದುದರಿಂದ ಮತ್ತು ಸಾಕಷ್ಟು ಆದಕ್ಕೆ ಪ್ರೋತ್ಸಾಹ ಸಿಕ್ಕದೇ ಇದ್ದುದರಿಂದ ನವಿಲು ತೀರ್ಥ ಪ್ರಾಜೆಕ್ಟಿಗೆ ಮುನಿರಾಬಾದ್ ಚೀಫ್ ಇಂಜನಿಯರ್ ತುಂಬಾ ಶಿಫಾರ್ಸುಕೊಟ್ಟಿದ್ದು ಉಂಟು. ಇದರಿಂದ ಈ ಪ್ರಾಜೆಕ್ಟ್ ಆಗುವುದು ಅವಶ್ಯಕವೆಂದು ಪ್ರತ್ಯೇಕವಾಗಿ ಮತ್ತೆ ಬೇರೆ ಹೇಳಬೇಕಾಗಿಲ್ಲ. ಇದರ ಬಗ್ಗೆ ಅಂಕಿ ಅಂಶಗಳನ್ನು ಕೊಡುವುದಾದರೆ ಈ ಯೋಜನೆ ನೆರವೇರಿದಲ್ಲಿ ನರಗುಂದ್‌ನಲ್ಲಿ ಒಂದು ಲಕ್ಷ ಐದು ಸಾವಿರ ಎಕರೆ ಭೂಮಿಯಲ್ಲಿ ನೀರಾವರಿಯಾಗುವುದು. ನವಿಲಗುಂದ ತಾಲ್ಲೂಕಿನಲ್ಲಿ ಒಂದು ಲಕ್ಷ 28 ಸಾವಿರ ಎಕರೆ, ರೋಣ ತಾಲ್ಲೂಕಿನಲ್ಲಿ ಒಂದು ಲಕ್ಷ 34 ಸಾವಿರ ಎಕರೆ, ಹೂಬ್ಲಿ ತಾಲ್ಲೂಕಿನಲ್ಲಿ 35 ಸಾವಿರ ಎಕರೆ, ಗದಗ್ ತಾಲ್ಲೂಕಿನಲ್ಲಿ 12 ಸಾವಿರ ಎಕರೆ, ರಾಮದುರ್ಗದಲ್ಲಿ 12 ಸಾವಿರ ಎಕರೆ ಮತ್ತು ಬಾದಾಮಿ ತಾಲ್ಲೂಕಿನಲ್ಲಿ ಐದು ಸಾವಿರ ಎಕರೆ ಹೀಗೆ ಒಟ್ಟು ಈ ಪ್ರಾಜೆಕ್ಟ್ ಉಪಯೋಗದಿಂದ ಸುಮಾರು ಐದು ಲಕ್ಷ ಎಕರೆ ಜಮೀನು ಇರ್ರಿಗೇಷನ್ ಅಂದರೆ ನೀರಾವರಿ ಆಗುತ್ತದೆ. ಆದರೆ ಸದ್ಯಕ್ಕೆ ಉಪಯೋಗವಾಗುವಂತಹ ಮೂರು ಲಕ್ಷ ಎಕರೆ ಜಮೀನು ನೀರಾವರಿಯಾಗುವುದು ನಿರ್ವಿವಾದವಾದಮಾತು. ಈ ಪ್ರಾಜೆಕ್ಟ್‌ಗೆ ಸರ್ವಸಾಧಾರಣವಾಗಿ, ಈಗಿನ ಅಂದಾಜು ಪ್ರಕಾರ 22ಕೋಟಿ ರೂಪಾಯಿಗಳ ವೆಚ್ಚ ಹಿಡಿಯಬಹುದು ಎಂದು ತಜ್ಞರ ವಿಚಾರ. ಮತ್ತು ಒಂದು ಎಕರೆಗೆ 500 ರೂಪಾಯಿಗಳ ನೀರಿನ ಖರ್ಚು ಬರಬಹುದು ಎಂದು ತಜ್ಞರ ವಿಚಾರ. ಇನ್ನು ಇದಕ್ಕಿಂತಲೂ ಹೆಚ್ಚಿಗೆ ಹೇಳುವುದಾದರೆ ಇದರಿಂದ ಲಾಭವೆಷ್ಟು ಬರುತ್ತದೆ ಎಂಬ ಪ್ರಶ್ನೆಯಿಲ್ಲ. ಇಲ್ಲಿ ಜನತೆಗೆ ಅವಶ್ಯಕವಾಗಿ ಬೇಕಾದಂಥಾದ್ದು ಅನ್ನ ಹಾಗೂ ನೀರು.

ಆದ್ದರಿಂದ ಅಲ್ಲಿ 12 ತಿಂಗಳೂ ಕೂಡ ಸರ್ವಸಾಧಾರಣವಾಗಿ ಬೇರೆ ಜೀವನ ಬಿಟ್ಟು ಮಣ್ಣಿನ ಜೀವನವಿರಬೇಕೆಂಬ ಹವ್ಯಾಸ ಮಾಡಬೇಕಾಗಿದೆ. ಅದರೊಳಗೆ ಶೇಕಡ 2 ಅಥವಾ ಶೇಕಡ 3ರಷ್ಟು ಬಡ್ಡಿ ಬರುತ್ತದೆಂಬ ವಿಚಾರವಲ್ಲ. ಆದ್ದರಿಂದ ಸರ್ಕಾರದವರು ರೈತರ ಮನಸ್ಸನ್ನು ಮಣ್ಣಿನ ಮೇಲೆ ಒಲಿಸುವ ಉದ್ದೇಶವನ್ನು ಇಟ್ಟುಕೊಂಡಿರಬೇಕು. ಅದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಎರಡನೆಯ ವಿಚಾರ. ಈ ಏರಿಯಾಗಳಲ್ಲಿ ಈಗಿನ ಪರಿಸ್ಥಿತಿಯೊಳಗೆ ನೂರಾರು ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರೇ ಸಿಕ್ಕುವುದಿಲ್ಲ. ಎಷ್ಟೋ ಹಳ್ಳಿಗಳಲ್ಲ ಕೆರೆಗಳು ಉಂಟು. ಆದರೆ ನರಗುಂದ್, ನವಲಗುಂದ್ ಮತ್ತು ಸೌಂದತ್ತಿ ತಾಲ್ಲೂಕ್‌ಗಳಲ್ಲಿ ಒಂದು ವರ್ಷ 10 ಅಂಗುಲ, ಇನ್ನೊಂದು ವರ್ಷ 15 ಅಂಗುಲದಷ್ಟು ಮಳೆಯಾಗುತ್ತದೆ. ಒಟ್ಟಿನಲ್ಲಿ ಎರಡು ವರ್ಷಗಳಿಗೊಂದು ಸಾರಿ ಮಾತ್ರ ಕೆರೆಯೊಳಗೆ ನೀರು ಇರುತ್ತದೆ. ಆಗ ನೀರು ತುಂಬವಂತಹ ಪ್ರಸಂಗ ಬರುತ್ತದೆ. ಆದರೆ 1958–59 ಮತ್ತು 1959-60ನೇ ಸಾಲಿನ ಅಂಕಿ ಅಂಶಗಳನ್ನು ಹೋಲಿಸಿ ನೋಡಿದರೆ ಈ ಪ್ರದೇಶಗಳಲ್ಲಿ ಈ ವರ್ಷ ಬಹುತೇಕ ಎಲ್ಲಾ ಕೆರೆಗಳಲ್ಲಿಯೂ ನೀರೇ ಇಲ್ಲವೆಂದು ಹೇಳಬಹುದು. ಆದರೆ ಹೂಬ್ಲಿ ಮತ್ತು ಗದಗ್ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿನ ಪರಿಸ್ಥಿತಿ ಸರ್ವಸಾಧಾರಣವಾಗಿ ಸುಧಾರಿಸಿದೆ.

[SRI Y. RAMAKRISHNA in the Chair.]

ಇತರ ಭಾಗದ ಜಮೀನುಗಳಲ್ಲಿ ಬೇರೆ ಬೆಳೆಗಳನ್ನು ಬೆಳೆಯುತ್ತಾರೆ. ನವಲ್‌ಗುಂದ್ ತಾಲ್ಲೂಕಿನಲ್ಲಿ ಗೋಧಿ ಬೆಳೆ 1·9 ರಷ್ಟು ಬೆಳೆಯುತ್ತಾರೆ. ಇದು ಗೋಧಿ ಬೆಳೆಗೆ ಬಹಳ ಅತ್ಯುತ್ತಮವಾದ ಪ್ರದೇಶ ಇತರ ತಾಲ್ಲೂಕ್ ಪ್ರದೇಶಗಳಲ್ಲಿ ಗೋಧಿ ಬೆಳೆ ಅಷ್ಟೊಂದು ಇಲ್ಲ. ಇವಕ್ಕೆಲ್ಲಾ ವಿಚಾರ ಮಾಡಿದರೆ ಮನಿಕ್ರಾಪ್ಸ್ ಬೆಳೆಯುವ ಅವಕಾಶ ಈ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಆದ್ದರಿಂದ ಈ ಪ್ರದೇಶಗಳ ಭೂಮಿಯನ್ನು ಶ್ರೇಷ್ಠವಾದ ಭೂಮಿಯೆಂದು ಹೇಳಬಹುದು.

ಈ ಎಲ್ಲ ದೃಷ್ಟಿಯಿಂದ ಇದನ್ನು ವಿಚಾರ ಮಾಡುವುದಾದರೆ ಈ ಪ್ರಾಜೆಕ್ಟನ್ನು ಅಂದರೆ ಈ ನೀರಾವರಿ ಯೋಜನೆಯನ್ನು ಅತಿ ಶೀಘ್ರವಾಗಿ ಕೈಕೊಳ್ಳಲೇಬೇಕೆಂಬುದಾಗಿ ನಾನು ಮತ್ತೊಮ್ಮೆ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಂಬೈ ರಾಜ್ಯದ ಪ್ರದೇಶವಾಗಿದ್ದ ಈ ಭಾಗವು ಹೊಸ ಮೈಸೂರು ರಾಜ್ಯದಲ್ಲಿ ಸೇರಿದನಂತರ ಈ ಹೊಸ ಮೈಸೂರು ರಾಜ್ಯಸರ್ಕಾರದವರು ಈ ಮಲಪ್ರಭಾ ಯೋಜನೆಯನ್ನು ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಇದನ್ನು ಕೈಕೊಳ್ಳಬಹುದೆಂದು ನಾವುಗಳೆಲ್ಲರೂ ನಿರೀಕ್ಷಿಸಿದ್ದೆವು. ಆದರೆ ಆ ಕಾಲಕ್ಕೆ ಅದನ್ನೀ ಸರ್ವೇ ಆಗಿಲ್ಲವೆಂಬ ಕಾರಣದಿಂದ ಮುಂದಕ್ಕೆ ಹಾಕಲಾಯಿತು. ಆದರೆ ಈಗ ಈ ಯೋಜನೆಯನ್ನು ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆಂಬುದಾಗಿ ನನಗೆ ತಿಳಿಯಬಂದಿದೆ. ಈ ಕಾರ್ಯ ಇಲ್ಲಿಗೆ ಮೂರು ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಆದರೆ ಈಗಲೂ ಸಹ ಈ ಯೋಜನೆಯನ್ನು ಕೂಡಲೆ ಕೈಗೊಳ್ಳಲಿಕ್ಕೆ ಸಾಕಷ್ಟು ಅವಕಾಶವಿದೆ. ಅಲ್ಲಿ ಮಣ್ಣು ಕಾಮಗಾರಿ ಕೆಲಸ ಇತ್ಯಾದಿಗಳನ್ನು ನಡೆಸಬಹುದು. ಅಲ್ಲಿ ಕ್ಷಾಮದೆಶೆಯಿಂದ ಕೂಲಿಗಾರರಿಗೆ ಕೂಲಿ ದೊರೆಯದೆ ಬಹಳ ತೊಂದರೆಗೊಳಗಾಗಿದ್ದಾರೆ. ಆ ದೃಷ್ಟಿಯಿಂದಲಾದರೂ ಈಗ ಈ ಕಾಮಗಾರಿಯನ್ನು ಅಲ್ಲಿ ಕೂಡಲೆ ಕೈಗೊಳ್ಳಬೇಕಾದ್ದು ಅತ್ಯವಶ್ಯಕ. ಈ ಎಲ್ಲ ಕಾರಣಗಳಿಂದಲೂ ಮತ್ತೊಮ್ಮೆ ಈ ಯೋಜನೆಯನ್ನು ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ಯೋಜನೆಯನ್ನು ಮೂರನೇ ಪಾಂಚವಾರ್ಷಿಕ ಯೋಜನೆಯು ಬರುವವರೆಗೂ ಕಾಯದೆ ಈಗಲೇ ಕೈಗೊಳ್ಳಬೇಕೆಂದು ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ. ಈ ಒಂದು ಯೋಜನೆ ಅಲ್ಲಿ ಆಗದ ವಿನಾ ಆ ಪ್ರದೇಶದಲ್ಲಿ ಯಾವ ಕೆಲಸಗಳೂ ಆಗುವುದಿಲ್ಲ. ಹೋದ ಸಾಲಿನಲ್ಲಿ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದಿಟ್ಟಿದ್ದ ಹಣ ಸಹ ಲ್ಯಾಪ್ಸಾಗಿದೆ. ಅಂಥ ಕಂಟಿಂಜನ್ಸಿ ಇರುವುದನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಯವನ್ನು ಕೂಡಲೆ ಕೈಕೊಳ್ಳಬೇಕೆಂದು ಹೇಳುತ್ತೇನೆ. ಇದರಲ್ಲಿ ತಪ್ಪೇನೂ ಇರಲಾರದೆಂದು ನನ್ನ ಭಾವನೆ. ಇಷ್ಟು ಮಾತನ್ನು ಹೇಳಿ ನಾನೀಗ ಸಭೆಯ ಅನುಮತಿಗಾಗಿ ನನ್ನ ಗೊತ್ತುವಳಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ನನ್ನ ಸ್ನೇಹಿತರಾದ ಶ್ರೀ ಆರ್. ಎಂ. ಪಾಟೀಲರವರು ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯವನ್ನು ನಾನು ನನ್ನ ತಿದ್ದುಪಡಿಯೊಂದಿಗೆ ಸೆಕೆಂಡ್ ಮಾಡುತ್ತೇನೆ.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ನಮ್ಮ ಸ್ನೇಹಿತರಾದ ಶ್ರೀ ಆರ್. ಎಂ. ಪಾಟೀಲ್‌ರವರು ತಂದಿರತಕ್ಕ ನಿರ್ಣಯವು ಬಹಳ ಒಳ್ಳೆಯದೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಉತ್ತರ ಕರ್ಣಾಟಕ ಪ್ರದೇಶದ ಬೆಳಗಾಂ ಜಿಲ್ಲೆಯು ಬಹುತೇಕ ನಾನು ಹೇಳುವುದಾದರೆ ನಮ್ಮ ಚಿತ್ರದುರ್ಗ ಜಿಲ್ಲೆಯಿಂದ ಮುಂದಕ್ಕೆ ಅಂಟಿಕೊಂಡು ಒಂದೇ ಪ್ರದೇಶವಾಗಿದ್ದಂತ ಕಾಣುತ್ತದೆ. ಈ ದಿವಸ ಈ ಯೋಜನೆ ನಡೆಯಬೇಕಾದ ಸ್ಥಳ ಬೆಳಗಾಂ ಜಿಲ್ಲೆಯಲ್ಲಿರುತ್ತದೆ. ಆ ಮಲಪ್ರಭ ನದಿಯು ಪಶ್ಚಿಮ ಘಟ್ಟಗಳಲ್ಲೆಲ್ಲೋ ಹುಟ್ಟುತ್ತೆಂದು ಕಾಣುತ್ತದೆ. ಆದರೆ ಆ ವಿವರಗಳೆಲ್ಲ ನನಗೆ ಸರಿಯಾಗಿ ಗೊತ್ತಿಲ್ಲ. ಆದರೆ ಈ ಮಲಪ್ರಭಾ ನದಿ ಒಂದು ಕಡೆ ಹೋಗಿ ಕೃಷ್ಣಾನದಿಗೆ ಸೇರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನೂ ಸಹ ಇತರ ನನ್ನ ಕೆಲವು ಸಹೋದ್ಯೋಗಿಗಳೊಡನೆ ಆ ಮಲಪ್ರಭಾ ನಿರ್ಮಾಣವಾಗತಕ್ಕ ಪ್ರದೇಶವನ್ನು ನೋಡಿಕೊಂಡು ಬರುವಂಥಾ ಒಂದು ಅವಕಾಶವನ್ನು ನಮ್ಮ ಮಂತ್ರಿಗಳು ದೊರಕಿಸಿ ಕೊಟ್ಟಿದ್ದರು. ನಾನು ಆ ಪ್ರದೇಶಕ್ಕೆ ಹೋಗಿದ್ದುದರಿಂದ ನನಗೆ ಅಲ್ಲಿನ ಅನೇಕ ಮಹತ್ತರವಾದ ವಿಷಯಗಳು ಗೊತ್ತಾದವು. ಆ ಸ್ಥಳವನ್ನು ನೋಡಿದ ಮೇಲೆ ನನ್ನ ಮನಸ್ಸಿನಲ್ಲಿ ಏನನ್ನಿಸಿತೆಂದರೆ ಸರ್ಕಾರದವರು ನ್ಯಾಯವಾಗಿಯೂ ಮಾಡಬೇಕಾಗಿದ್ದ ಕಲಸಕಾರ್ಯಗಳೇನಾದರೂ ಇದ್ದರೆ ಅವು ಈ ಒಂದು ಕಾರ್ಯಕ್ಕಿಂತ ಉತ್ತಮವಾದ ಕಾರ್ಯಗಳು ಬೇರೆ ಯಾವುದೂ ಇರಲಾರದೆಂದು ನಾನು ಹೇಳಿದರೆ ಇದರಲ್ಲಿ ಆಶ್ಚರ್ಯವಾಗಲೀ ಉತ್ಪ್ರೇಕ್ಷೆಯಾಗಲೀ ಯಾವುದೂ ಇಲ್ಲವೆಂಬುದಾಗಿ ನಾನು ಭಾವಿಸುತ್ತೇನೆ. ನಾನು ಈಗ ಈ ಹೊಸ ಪ್ರಾಜೆಕ್ಟು ಆಗಬೇಕೆಂದು ಕೇಳುತ್ತಿರುವ ಪ್ರದೇಶವನ್ನೂ ನೋಡಿದ್ದೇನೆ, ಮತ್ತೆ ನಮ್ಮ ಕೃಷ್ಣರಾಜಸಾಗರ ಜಲಾಶಯ ನಿರ್ಮಾಣವಾಗಿರತಕ್ಕ ಪ್ರದೇಶವೇನಿದೆ ಅದನ್ನೂ ಸಹ ನೋಡಿದ್ದೇನೆ. ಈಗ ಈ ಹೊಸ ಜಲಾಶಯ ನಿರ್ಮಾಣವಾಗಬೇಕೆಂದು

(ಶ್ರೀ ಜಿ. ಶಿವಪ್ಪ)

ಹೇಳುತ್ತಿರುವ ಕಡೆ ಆ ನದಿ ಒಂದು ಪರ್ವತವನ್ನೇ ಇಬ್ಭಾಗ ಮಾಡಿಕೊಂಡು ಮುಂದಕ್ಕೆ ಹರಿದುಹೋಗಿದೆ. ಇಂಥ ಒಂದು ಅತ್ಯುತ್ತಮವಾದ ಸನ್ನಿವೇಶ ದೊರೆಯುತಕ್ಕ ಸ್ಥಳ ಅದು ಕನ್ನಡಿಗರ ರಾಜ್ಯವಾಗಲಿ, ತೆಲುಗರ ರಾಜ್ಯವೇ ಆಗಿರಲಿ ಅಥವಾ ತಮಿಳ ರಾಜ್ಯವೇ ಆಗಿರಲಿ, ಇದಕ್ಕಿಂತ ಉಪಯುಕ್ತವಾದ ಕೆಲಸ ಮತ್ತೊಂದಿರಲಾರದೆಂದು ಹೇಳುತ್ತೇನೆ. ಹೀಗಿರುವಾಗಲೂ ಸಹ ನಮ್ಮ ಸರ್ಕಾರದವರು ಏಕೆ ಇನ್ನೂ ಈ ವಿಚಾರದಲ್ಲಿ ಮನಸ್ಸು ಮಾಡಿಲ್ಲವೋ ಅದು ನನಗೆ ತಿಳಿಯದಾಗಿದೆ. ಸರ್ಕಾರದವರು ಕೂಡಲೆ ಈ ಕಾರ್ಯ ಕೈಗೊಳ್ಳಬೇಕಾಗಿತ್ತೆಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ಆದರೆ ಸರ್ಕಾರದವರಿಗೆ ಕೆಲವು ತೊಂದರೆಗಳಿರಬಹುದು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಆ ನದಿ ಒಂದು ಪರ್ವತವನ್ನೇ ಇಬ್ಭಾಗ ಮಾಡಿಕೊಂಡು ಹರಿಯುತ್ತಿರುವುದರಿಂದ ಅಂಥಾ ಅಯಕಟ್ಟಿನ ಪ್ರದೇಶ ಡ್ಯಾಂ ಕಟ್ಟಲು ಸಿಕ್ಕುವುದು ದುರ್ಲಭ. ಅಂಥಾ ಅನುಕೂಲ ಅಲ್ಲೀಗ ನಮಗೆ ದೊರೆತಿದೆ. ಅದರ ಬಗ್ಗೆ ನಮಗೆ ಆಗತಕ್ಕ ಖರ್ಚಾದರೋ ತೀರಾ ಅಲ್ಪವಾದದ್ದು—ಪ್ರ ಯೋ ಜ ನ ಅಪರಿಮಿತವಾದದ್ದು. ನಾನು ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಎಂದರೆ—ಭಾಕ್ರಾ ನಂಗಾಲ್, ನಾಗಾರ್ಜುನ ಸಾಗರ, ತುಂಗಭದ್ರ ಡ್ಯಾಂ, ತುಂಗ ಮತ್ತು ಭದ್ರ ಈ ಡ್ಯಾಂಗಳನ್ನೆಲ್ಲ ನೋಡಿದ್ದೇನೆ. ಆದರೆ ಇಷ್ಟು ಕಡಮೆ ವೆಚ್ಚದಲ್ಲಿ—ಅಷ್ಟು ಭಾರಿ ಪ್ರಮಾಣದ ನೀರಾವರಿ ಯೋಚನೆಯನ್ನು ಕಟ್ಟಲು ನಮ್ಮ ಭರತಖಂಡದಲ್ಲೇ ಬೇರೊಂದು ಕಡೆ ಇಂಥಾ ಅನುಕೂಲವಾದ ಸ್ಥಳ ಸಿಕ್ಕಲಾರದೆಂದು ಹೇಳುತ್ತೇನೆ. ಈ ಡ್ಯಾಂ ನಿರ್ಮಾಣವಾದರೆ ಅಲ್ಲಿ ಕೇವಲ 300-400 ರೂಪಾಯಿಗಳಲ್ಲಿ ಒಂದು ಎಕರೆಗೆ ನೀರು ಸಿಕ್ಕಿದಂತೆ ಆಗುತ್ತದೆಂದು ಅಲ್ಲಿ ಹೇಳುತ್ತಿದ್ದಾರೆ. ಇತರ ಕಡೆಗಳಲ್ಲಿ ಒಂದಕ್ಕೆ 4 ರಷ್ಟು, 5 ರಷ್ಟು 10 ರಷ್ಟು ಅಂದಾಜಗಳು ಜಾಸ್ತಿ ಆಗುತ್ತವೆ. ರೇಟುಗಳು ಜಾಸ್ತಿ ಆಗುತ್ತವೆ. ಆದರೆ ಇಲ್ಲಿ ಸಾಧಾರಣವಾಗಿ ಒಂದುನೂರು ರೂಪಾಯಿಗಳಲ್ಲಿ ಒಂದು ಎಕರೆಗೆ ನೀರನ್ನು ಸರಬರಾಯಿ ಮಾಡಬಹುದೆಂದು ಹೇಳುತ್ತಿದ್ದಾರೆ. ಆದರೆ ಇಷ್ಟು ಚೀಪ್‌ರೇಟಿನಲ್ಲಿ ಇಂಥಾ ಒಂದು ಭಾರಿಪ್ರಾಜೆಕ್ಟ್ ನಮ್ಮ ಇಡಿಯ ಕರ್ಣಾಟಕದಲ್ಲೇ ಬೇರೊಂದು ಕಡೆ ಆಗಲು ಸಾಧ್ಯವಿಲ್ಲ. ಇಷ್ಟು ಕಡಮೆ ವೆಚ್ಚದಲ್ಲಿ ಇಂಥಾ ಒಂದು ಭಾರಿ ಪ್ರಾಜೆಕ್ಟ್ ನಮ್ಮ ಇಡೀ ದೇಶದಲ್ಲೇ ಬೇರೆ ಎಲ್ಲೂ ಆಗುವುದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಇಂಥಾ ಅನುಕೂಲವಿರುವುದರಿಂದ ಈ ಡ್ಯಾಮನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕೆಂದು ಹೇಳುತ್ತೇನೆ. ನಾನು ಆ ಪ್ರದೇಶವನ್ನು ನೋಡಿಕೊಂಡು ಬಂದಮೇಲೆ ನಮ್ಮ ಸ್ನೇಹಿತರಾದಂಥಾ ಶ್ರೀಮಾನ್ ದೊಡ್ಡಮೇಟಿಯವರಿಗೆ ತಾವು ಇಂಥ ಜನೋಪಯುಕ್ತ ಕಾರ್ಯಗಳಿಗೆ ಮನಸ್ಸನ್ನು ಕೊಡಿ, ಬರಿಯ ಹೆಸರಿನಲ್ಲೇನಿದೆ? ಎಂದು ಹೇಳಿದರೆ ಅವರು ಏಕ್‌ದಂ ಮುಖವನ್ನೇ ಕೆಡಿಸಿಕೊಂಡು ಬಿಡುತ್ತಾರೆ. ಈ ದಿವಸ ನಮ್ಮ ಕೆ. ಆರ್. ಸಾಗರದ ಡ್ಯಾಂನ ಉದ್ದ ಅಳತೆ ಮಾಡಿದರೆ ಅದು ಬಹುಶಃ ಒಂದೂಮುಕ್ಕಾಲು ಮೈಲಿಗಳಷ್ಟು ಉದ್ದವಿರಬಹುದು. ಆದರೆ ಈ ಮಲಪ್ರಭಾ ಅಣೆಕಟ್ಟಿನ ಉದ್ದವೆಲ್ಲ 2510 ಅಡಿಗಳಾದರೆ ಹೆಚ್ಚಾಯಿತು. ಕೆ. ಆರ್. ಸಾಗರ ಅಣೆಕಟ್ಟು 80 ಸಾವಿರ ಎಕರೆಗಳಿಗೆ ನೀರು ಸರಬರಾಯಿ ಮಾಡಿದರೆ ಈ ಮಲಪ್ರಭಾ ಅಣೆಕಟ್ಟು ಸಧ್ಯಕ್ಕೆ 3 ಲಕ್ಷ ಎಕರೆಗೆ ಮೊದಲು ನೀರು ಸರಬರಾಯಿ ಮಾಡಿ ಅಖೈರಿನಲ್ಲಿ 5 ಲಕ್ಷ ಎಕರೆಗಳ ತನಕ ನೀರು ಸರಬರಾಯಿ ಮಾಡುವಂಥಾ ಅಣೆಕಟ್ಟಾಗುತ್ತೆ. ಅಂದಮೇಲೆ ಇದಕ್ಕೂ—ಅದಕ್ಕೂ ತಾರತಮ್ಯ ಎಷ್ಟಾಗುತ್ತೆಂಬುದನ್ನು ತಾವೆಲ್ಲರೂ ಲೆಕ್ಕಹಾಕಿಕೊಳ್ಳಬಹುದು. ಆದರೆ ಇನ್ನು ಆ ಪ್ರದೇಶದ ಕಷ್ಟಸುಖಗಳೇನೆಂಬುದನ್ನೆಲ್ಲಾ ಈಗಾಗಲೇ ಶ್ರೀಮಾನ್ ಆರ್. ಎಂ. ಪಾಟೀಲ್‌ರವರು ಸಭೆಗೆ ತಿಳಿಸಿದ್ದಾರೆ. ಆದರೆ ಅಲ್ಲಿ ಕೆರೆಗಳಿರುವುದೇ ಅಪರೂಪವೆಂದು ಹೇಳಿದ್ದಾರೆ. ಮೇಲಾಗಿ ವರ್ಷಕ್ಕೆ 18-20 ಇಂಚ್ ಮಳೆಯಾದರೆ ಅದೇ ಹೆಚ್ಚಾಯಿತು. ಅಲ್ಲಿ ಕ್ಯಾಚ್‌ಮೆಂಟ್ ಏರಿಯಾಕ್ಕೆ ವಿಶಾಲವಾದ ಪ್ರದೇಶವಿದೆ. ಆದರೆ ಈ ಯೋಜನೆಯ ದೆಶೆಯಿಂದ ಕೆಲವು ಫಲವತ್ತಾದ ಭೂಮಿಗಳು ಮುಳುಗಡೆಯಾಗಬಹುದು. ಅದಾಗ್ಯೂ ಲಕ್ಷಾಂತರ ಜನರಿಗೆ ಉಪಕಾರವಾಗತಕ್ಕ ದೃಷ್ಟಿಯಿಂದ ಈ ಯೋಜನೆಯನ್ನು ಕೈಗೊಳ್ಳಲೇಬೇಕಾಗುವುದು. ಸವದತ್ತಿ ತಾಲ್ಲೂಕಿನಲ್ಲಿ ಕೆಲವು ಕಡೆ ಬಹಳ ಉತ್ಕೃಷ್ಟವಾದ ಜಮೀನು ಮುಳುಗಡೆಯಾಗುತ್ತೆಂದು ಜನರು ಹೇಳುತ್ತಿದ್ದಾರೆ. ಹಾಗೊಂದುವೇಳೆ ಅಲ್ಲೀನಾದರೂ ಜಮೀನು ಮುಳುಗಡೆ ಆಗುವುದಾದರೆ ಆ ಜನರಿಗೆ ಸ್ವಲ್ಪ ಹೆಚ್ಚಿನ ಪರಿಹಾರ ದ್ರವ್ಯವನ್ನು ಕೊಟ್ಟು ಈ ಚೀಪ್‌ರೇಟಿನಲ್ಲಿ ಆಗತಕ್ಕ ಈ ದೊಡ್ಡ ಅಣೆಕಟ್ಟನ್ನು ಸರ್ಕಾರದವರು ಸರ್ವಪ್ರಯತ್ನದಿಂದಲೂ ಕೂಡಲೇ ಕೈಗೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ವಿಚಾರದಲ್ಲಿ ಸರ್ಕಾರದವರು ಕೇವಲ ಈ ಪ್ರಾಜೆಕ್ಟುಗಳ ವಿಚಾರ ಬಂದಾಗ್ಗೆ ಅವುಗಳ ಮೆರಿಟ್ಸ್ ಡೀ ಮೆರಿಟ್ಸ್‌ಗಳಷ್ಟನ್ನೇ ನೋಡದೆ, ಈ ಕಾರ್ಯಗಳನ್ನು ಅವರು ಒಂದು ಮಾನವತೆಯ ದೃಷ್ಟಿಯಿಂದ ಹತ್ತಿರದ ದೃಷ್ಟಿಯಿಂದ ನೋಡಿ ಮಾಡಿದರೆ ಮುಂಡೆ ಇದರಿಂದ ದೇಶಕ್ಕೆ ದೊಡ್ಡ ಕಲ್ಯಾಣವಾಗುತ್ತದೆ. ಈ ದಿವಸ ಆ ಪ್ರದೇಶದ ಜನರಿಗೆ ನೀರಿನ ಅಭಾವ ಬಂದು ಅವರು ಬಹಳ ತೊಂದರೆಗೊಳಗಾಗಿದ್ದಾರೆ. ಆ ಪ್ರದೇಶದಲ್ಲಿ ಮಳೆ ಬೇರೆ ಆಗುತ್ತಿಲ್ಲ. ಕ್ಷಾಮ ಪೀಡಿತ ಪ್ರದೇಶವಾಗಿದೆ. ಬರದಿಂದ ಜನರು ಬೆಂದು ಬೇಸತ್ತು ಹೋಗಿದ್ದಾರೆ. ಆದರೆ ಈ ವಿಚಾರದಲ್ಲಾಗಲೇ ನಮ್ಮ ಮಾನ್ಯ P. W. D. ಮಂತ್ರಿಗಳವರು ಈ ಅಣೆಕಟ್ಟಿನ ವಿಚಾರದಲ್ಲಿ ಸರ್ಕಾರಕ್ಕೂ ಕೂಡ ಅಭಿಲಾಷೆಯಿದೆ ಎಂದು ಹೇಳಿದ್ದಾರೆ. ಆದುದರಿಂದ ಈ ಕೆಲಸವನ್ನು ಜಾಗ್ರತೆಯಾಗಿ ಸರ್ಕಾರದವರು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಒಂದು ಉದಾಹರಣೆ ಕೊಡಬೇಕಾದರೆ ಶರಾವತಿ ಪ್ರಾಜೆಕ್ಟನ್ನು ಪ್ರಾರಂಭಮಾಡಲು ಒತ್ತಾಯಮಾಡದೆ ಇದ್ದರೆ 3–4 ನೆಯ ಯೋಜನೆಯಲ್ಲೂ ಸೇರುತ್ತಿರಲಿಲ್ಲ. ಈ ಸಭೆಯಲ್ಲಿ ತ್ವರಿತವಾಗಿ ನಿರ್ಣಯವನ್ನು ತಂದು ಪ್ರಯತ್ನ ಮಾಡಿದ್ದರಿಂದ, ಕೋರ್ ಆಫ್ ದಿ ಪ್ಲಾನಿನಲ್ಲಿ ಅದನ್ನು ಸೇರಿಸಿದ್ದೂ ಅಲ್ಲದೆ, ಕೆಲಸವೂ ಪ್ರಾರಂಭವಾಯಿತು. ಅದೇ ದೃಷ್ಟಿಯಿಂದ ಈ ಪ್ರಾಜೆಕ್ಟನ್ನು ಮೀನಮೇಷ ನೋಡದೆ ಜಾಗ್ರತೆ ಪ್ರಾರಂಭಮಾಡಬೇಕು. ಸರ್ವೆ ಆಗಿ ಎಸ್ಟಿಮೇಟುಗಳು ಮುಗಿದಿವೆ. ಜಾಗ್ರತೆ ಈ ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗಬೇಕೆಂದು ಮತ್ತೊಮ್ಮೆ ಹೇಳುತ್ತೇನೆ. ಮೈಸೂರು ನಾಡು ಚಿನ್ನದ ನಾಡು, ಗಂಧದ ನಾಡೇ ಅಲ್ಲದೆ, ಕೆರೆಗಳ ಬೀಡೂ ಆಗಬೇಕು.

Sri C. J. MUCKKANNAPPA.—I rise to a point of order. ಬರೆದುಕೊಂಡು ಬಂದು ಓದುತ್ತಿದ್ದಾರೆ. ಇದು ಸರಿಯೇ ?

ಸಭಾಪತಿಗಳು.—ಓದುತ್ತಾ ಇಲ್ಲ.

ಶ್ರೀ ಜಿ. ಶಿವಪ್ಪ.—ಮೈಸೂರು ನಾಡು ಕೇವಲ ಕನ್ನಡಿಗರ ನಾಡೇ ಆಗದೆ, ಉರ್ದು ಮಾತನಾಡುವವರ, ತೆಲುಗು ಮಾತನಾಡುವವರ, ಮತ್ತಿತರ ಭಾಷೆ ಮಾತನಾಡುವವರ, ಸರ್ವರ ನಾಡಾಗಿ ಸರ್ವ ಸುಂದರವಾಗಿ ಬೆಳೆಯಬೇಕು. ಮಲಪ್ರಭಾ ಪ್ರಾಜೆಕ್ಟಿನಂತಹ ಕೆಲಸಗಳು ದೇಶದ ಎಲ್ಲಾ ಭಾಗಗಳಲ್ಲಿಯೂ ಆಗಬೇಕು. ಘಟಪ್ರಭ, ಮಲಪ್ರಭ, ಅಪ್ಪರ್‌ಕೃಷ್ಣ ಯೋಜನೆಗಳಿಗೆ ಪ್ರಯತ್ನಪಡೋಣ. ನನ್ನ ತಿಳುವಳಿಕೆ ಮಟ್ಟಕ್ಕೆ ದೊಡ್ಡ ದೊಡ್ಡ ಯೋಜನೆಗಳ ವಿಚಾರವನ್ನು ಸಾಧ್ಯವಾದಷ್ಟು ಮಟ್ಟಿಗೆ ತಿಳಿದುಕೊಂಡಿದ್ದೇನೆ. ಭಾರತದ ಎಲ್ಲಾ ಭಾಗಗಳೂ ಮುಂದುವರಿಯಬೇಕು. ಮೈಸೂರು ಮುಂದುವರಿಯಲು ಎಲ್ಲರೂ ಶ್ರಮಿಸಬೇಕು. ಬಹುತೇಕ ಸಣ್ಣಸಣ್ಣ ವಿಚಾರಗಳಿಗಾಗಿ ವ್ಯಾಜ್ಯಮಾಡುವ ಬದಲು ದೊಡ್ಡ ವಿಚಾರಗಳಿಗೆ ಗಮನ ಕೊಟ್ಟು, ಅಭಿವೃದ್ಧಿ ಕಾರ್ಯಗಳನ್ನು ಜಾಗ್ರತೆ ಮುಗಿಸುತ್ತೇವೆನ್ನುವ ಆ ಧೋರಣೆಯಿಂದ ನಡೆದುಕೊಳ್ಳೋಣ. ಸರ್ಕಾರದವರು ಅತಿ ಜಾಗ್ರತೆಯಾಗಿ ಈ ಪ್ರಾಜೆಕ್ಟನ್ನು ಕಾರ್ಯಗತಮಾಡಬೇಕೆನ್ನುವ ದೃಷ್ಟಿಯಿಂದ, ನನ್ನ ಅಭಿಪ್ರಾಯಗಳನ್ನು ಕಾತುರತೆಯಿಂದ ಮತ್ತು ತೀವ್ರತೆಯಿಂದ ವ್ಯಕ್ತಪಡಿಸಿದ್ದೇನೆ. ಶ್ರೀಮಾರ್ ಪಾಟೀಲ್‌ರವರು ತಂದಿರತಕ್ಕಂಥ ನಿರ್ಣಯವನ್ನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ನಾನು ಕಳುಹಿಸಿದ್ದ ಅಮೆಂಡ್‌ಮೆಂಟಿನಲ್ಲಿದ್ದ ರೋಣ್ ಎನ್ನುವುದನ್ನು ಬಹುಶಃ ಮಾನ್ಯ ಪಾಟೀಲರು ಅವರ ಗೊತ್ತುವಳಿಯಲ್ಲಿ ಸೇರಿಸುವುದನ್ನು ಮರೆತುಬಿಟ್ಟಿದ್ದಾರೆ ಎಂದು ಕಾಣುತ್ತದೆ. ಆದರಂತೆಯೇ, ಈ ಗೊತ್ತುವಳಿಯಲ್ಲಿ ನಿಜವಾಗಿ ಕೆಲವು ತಾಲ್ಲೂಕುಗಳ ಹೆಸರುಗಳನ್ನು ಕಾಣಿಸಿದ್ದರೂ, ಇನ್ನೂ ಕೆಲವು ತಾಲ್ಲೂಕುಗಳನ್ನು ಎಂದರೆ ಗದಗ್, ಹುಬ್ಬಳ್ಳಿ, ರಾಮದುರ್ಗ, ಬಾದಾಮಿ ಈ ಸ್ಥಳಗಳನ್ನು ಕಾಣಿಸಬೇಕಾದ್ದು ಅವಶ್ಯಕವಿತ್ತು. ಆದರೆ ಗೊತ್ತುವಳಿಯನ್ನು ಬಹಳ ಅವಸರದಲ್ಲಿ ಕಳುಹಿಸಿದಂತೆ ಕಾಣುತ್ತದೆ. ನಾನೂ ಬೆಳಗಿನ ಗಡಿಬಿಡಿಯಲ್ಲಿ ರೋಣ್ ಒಂದನ್ನೇ ಅಮೆಂಡ್‌ಮೆಂಟಿನಲ್ಲಿ ಕಳುಹಿಸಿದ್ದೇನೆ. ನಿಜವಾಗಿ ಈ ಗೊತ್ತುವಳಿಯಲ್ಲಿ ಗದಗ್, ಹುಬ್ಬಳ್ಳಿ, ರಾಮದುರ್ಗ, ಬಾದಾಮಿ, ಸೌದತ್ತಿ, ನವಲ್‌ಗುಂದ್, ನರ್ಗುಂದ್ ಮುಂತಾದುವೂ ಕೂಡಿವೆ ಎಂದು ಇರಬೇಕಾದುದು ಅಗತ್ಯ: ಏಕೆಂದರೆ ಮಲಪ್ರಭಾ ನೀರು ಈ ಎಲ್ಲಾ ಪ್ರದೇಶಗಳಲ್ಲಿ ಹರಿಯುತ್ತದೆ, ಮತ್ತು ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಎಕರೆ ನೀರು ಉಣ್ಣುತ್ತೆ ಎನುವುದನ್ನು ಆಗಲೇ ನನ್ನ ಸ್ನೇಹಿತರು ತಿಳಿಸಿದ್ದಾರೆ. ಇಷ್ಟು ದೊಡ್ಡ ಯೋಜನೆಯನ್ನು ನಾವು ಹೇಗೆ ಸದುಪಯೋಗಪಡಿಸಿಕೊಳ್ಳಬೇಕೆಂಬುದನ್ನು ಪಾಟೀಲರು ಮತ್ತು ಶಿವಪ್ಪನವರೂ ಹೇಳಿದ್ದಾರೆ. ಆದ್ದರಿಂದ ಇದನ್ನು ನಾನು ಹೆಚ್ಚಿಗೆ ಹೇಳಬೇಕೆಂದಿಲ್ಲ. ಫಲ ಮತ್ತು ಬೆಳೆ, ಈ ದೃಷ್ಟಿಯಿಂದ ಹೆಚ್ಚಿಗೆ ಬರಬೇಕು ಎನ್ನುವುದು ಒಂದು ಮಹತ್ವದ ಕಾರಣ. ಇದರಿಂದ ಹೊರಟ ಪ್ರವಾಹ ಮತ್ತು ಅದು ಹರಿಯುವುದರ ಪರಿಣಾಮವಾಗಿ, ಜನರಿಗೆ ನಿತ್ಯ ಜೀವನಾಧಾರವಾದ ನೀರನ್ನು ಸಹ ನಾವು ದೊರಕಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ತಮಗೆ ಮತ್ತು ಕಂದಾಯ ಮಂತ್ರಿಗಳಿಗೆ ನಾನು ಎಷ್ಟೋ ವೇಳೆ ಪ್ರಶ್ನೆ ಹಾಕಿ ಈ ವಿಚಾರದಲ್ಲಿ ಕೇಳಿದ್ದೇನೆ. ಮೊನ್ನೆ ಮೊನ್ನೆ ಕೆಲವು ಪ್ರಶ್ನೆಗಳಿಗೆ ಉತ್ತರಗಳು ಕೊಡಲ್ಪಟ್ಟಿವೆ. ಆರು ಮೈಲಿ ಹೋಗಿ ಕುಡಿಯುವ ನೀರನ್ನು ತರಬೇಕಾಗುತ್ತದೆ. ಕೆಲವು ಹಳ್ಳಿಗಳಲ್ಲಿ ಒಕ್ಕಲುಗಳು, ವ್ಯವಸಾಯಗಾರರು ಚಕಡಿ ತೆಗೆದುಕೊಂಡು ಹೋಗಿ ಒಂದು ದಿವಸಕ್ಕೆ ಒಂದು ಸಾರಿಗೆ ನೀರನ್ನು ತರಬೇಕಾದಂಥ ಸ್ಥಿತಿ ಇದೆ. ಇಷ್ಟಾದರೂ ಎಂಟು ದಿವಸಕ್ಕೆ ಒಂದು ಸರಿ ಸ್ನಾನ ಮಾಡದೆ ಇರುವ ಕೊರತೆ ಇದೆ. ಇಂಥ ಅನೇಕ ಹಳ್ಳಿಗಳು ಎಲ್ಲಾ ಪ್ರದೇಶಗಳಲ್ಲಿಯೂ ಉಂಟು. ಈ ಕಾರಣಕ್ಕಾಗಿ ಈ ಪ್ರಶ್ನೆಯನ್ನು ಸರ್ಕಾರದವರು ಮಹತ್ವದಿಂದ ನೋಡಬೇಕು. ಹುಬ್ಲಿ, ಧಾರವಾಡ, ದಾವಣಗೆರೆ, ಬೆಂಗಳೂರು, ಮೈಸೂರು ಪಟ್ಟಣಗಳಿಗೆ ನೀರನ್ನು ಮನೆಯೊಳಗೆ ತರುವುದಲ್ಲದೆ, ನಿಮ್ಮ ಮೈಮೇಲೆ ನಿಮ್ಮ ಮುಖದ ಮೇಲೆ ಬಿಡುವುದಕ್ಕೆ ತಯಾರು ಮಾಡುತ್ತೀರಿ. ಆದರೆ ಹಳ್ಳಿ ಜನರು ಈ ದಿನ ಆರು ಆರು ಮೈಲಿಯಿಂದ ನೀರು ತಂದು ಕುಡಿಯಬೇಕೆಂದರೆ ಅವರ ವೇಳ್ಯ, ಹಣ, ಶ್ರಮ ಎಷ್ಟಾಗುತ್ತದೆ ? ಹಳ್ಳಿಜನರಿಗೆ ಈ ಕಷ್ಟ ಪರಿಸ್ಥಿತಿ ತೊಲಗಿಸುವ, ಸಮಾಜವಾದಿಸ್ವರೂಪ ರಾಜ್ಯವನ್ನು ಕಟ್ಟುವ ನಾವು ಅವರನ್ನು ಕಷ್ಟದಿಂದ ಉಪಹರಿಸುವ ಮಾತಿಗೆ ಏನೂ ವ್ಯವಸ್ಥೆ ಮಾಡಿಲ್ಲ. ಹಳ್ಳಿಗಳಿಗೆ ಎಲ್ಲಾ ಅನುಕೂಲ ಮಾಡುತ್ತೇವೆಂದು ಅನೇಕ ರೀತಿಯಾಗಿ ದೊಡ್ಡ ದೊಡ್ಡ ವ್ಯಾಖ್ಯಾನಗಳನ್ನು ಕೊಡುತ್ತೀರಿ. ಆದರೆ ಈ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಕುಡಿಯುವ ನೀರಿನ ವ್ಯವಸ್ಥೆ ಕನಿಷ್ಟ ಪ್ರಮಾಣದಲ್ಲೂ ಹಳ್ಳಿಗಳ ಕಡೆ ಆಗಿಲ್ಲ. ಇದನ್ನು ಪ್ರಥಮವಾಗಿ ತೆಗೆದುಕೊಳ್ಳಬೇಕು. ಆಹಾರದ ಪರಿಸ್ಥಿತಿಯಲ್ಲಿ ಬದಲಾವಣೆಯಾಗಬೇಕು, ನಾವು ಆಹಾರದಲ್ಲಿ ಸ್ವಯಂ ಪೂರ್ಣವಾಗಬೇಕು, ಸ್ವಾವಲಂಬಿಯಾಗಬೇಕು ಎಂದು ಹೇಳುತ್ತಲೇ ಇದ್ದೇವೆ. ಆದರೆ ಇದರ ಕಡೆ ಕೇಂದ್ರ ಸರ್ಕಾರದವರಾಗಲೀ ನಾವಾಗಲೀ ಸರಿಯಾದ ಗಮನ ಏಕೆ ಕೊಡಬಾರದು? ಕೇಂದ್ರ ಸರ್ಕಾರ ದಕ್ಷಿಣ ಭಾರತವನ್ನು ಅಲಕ್ಷ್ಯದಿಂದ ನೋಡುತ್ತಿದೆ ಎಂದು ಅನೇಕ ರೀತಿಯ ಕೂಗು ಇದೆ. ಆ ಕೂಗಿನಲ್ಲಿ ಎಷ್ಟರ ಮಟ್ಟಿಗೆ ಸತ್ಯವಿದೆ ಎಂಬ ಮಾತನ್ನು ನಾವು ಚರ್ಚೆ ಮಾಡುವುದು ಬೇಡ. ಕೇಂದ್ರ ಸರ್ಕಾರದ ಮುಂದೆ ಅನೇಕ ಯೋಜನೆಗಳನ್ನಿಟ್ಟು, "ಅಯ್ಯಾ, ಈ ಎಲ್ಲಾ ಯೋಜನೆಗಳನ್ನೂ ಪೂರೈಸಿಕೊಡಿ. ದಕ್ಷಿಣ ಭಾರತ ಇಡೀ ಭಾರತದ ಆಹಾರ ಕೊರತೆಯನ್ನು ಪೂರೈಸುತ್ತದೆ" ಎಂದು ಅವರಿಗೆ ಹೇಳೋಣ. ಈಗ ಉತ್ತರ ಕರ್ನಾಟಕದಲ್ಲಿ 4-4 ಜಿಲ್ಲೆಗಳಲ್ಲಿ ಜನಗಳು ಸಾಮಾನ್ಯವಾಗಿ 2-3 ವರ್ಷಕ್ಕೊಮ್ಮೆ ಬರಗಾಲಕ್ಕೆ ತುತ್ತಾಗುತ್ತಿದ್ದರೂ, ಯಾವ ಒಕ್ಕಲು ತನದ ಅಭಿವೃದ್ಧಿಯೋಜನೆಗಳೂ ಆಗಿಲ್ಲ. ಹೀಗಿದ್ದೂ ಸಹ, ಈ ನಾಲ್ಕು ಜಿಲ್ಲೆಗಳಲ್ಲಿ ಅಂಕಿ ಸಂಖ್ಯೆ ತೆಗೆದುಕೊಂಡರೆ, ಇವುಗಳು ಆಹಾರದ ವಿಷಯದಲ್ಲಿ ಸರ್‌ಪ್ಲಸ್ ಇವೆ, ಈ ನಾಲ್ಕು ಜಿಲ್ಲೆಗಳಲ್ಲಿ ಬೇಕಾದ್ದಕ್ಕಿಂತ ಹೆಚ್ಚಿಗೆ ಆಹಾರ ಇಷ್ಟು ಬರಗಾಲದಲ್ಲಿ ಕೂಡ ಬೆಳೆಯುವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಅಲ್ಲಿನ ಜನರಿಗೆ ಕಲ್ಪಿಸಿಕೊಟ್ಟರೆ, ಇಡೀ ಕರ್ನಾಟಕ ರಾಜ್ಯಕ್ಕೆ ಬೇಕಾಗುವಷ್ಟು ಆಹಾರವನ್ನು ಈ ನಾಲ್ಕು ಜಿಲ್ಲೆಗಳಲ್ಲಿ ಪೂರೈಸುತ್ತೇವೆ. ತಮಗೆ ಹೇಳುವುದಾದರೆ ಬಿಜಾಪುರ ಜಿಲ್ಲೆಯೊಂದೇ ಈ ರೀತಿ ಮಾಡಬಹುದು. ಈ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ಕರ್ನಾಟಕದ ಸಮಗ್ರ ಉನ್ನತಿಗೆ ಈ ಎಲ್ಲಾ ಯೋಜನೆಗಳನ್ನೂ ಕೈಗೊಳ್ಳಬೇಕು. ಇವುಗಳನ್ನು ಕೈಗೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇದರ ಜೊತೆಗೆ ರೈಲ್ವೆ ಮುಂತಾದ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಾವು ಕೈಗೊಳ್ಳಬೇಕು. ನೀರಿನ ವಿಷಯದಲ್ಲಿ ಆಂಧ್ರದಿಂದ ನಮ್ಮ ಸರ್ಕಾರಕ್ಕೆ

(ಶ್ರೀ ಎ. ಜೆ. ದೊಡ್ಡಮೇಟಿ)

ಏನೇನೋ ತೊಡಕು ಬಂದಿದೆ, ಈ ಕಾರಣಕ್ಕಾಗಿ ವಿಳಂಬವಾಗುತ್ತಿದೆ ಎನ್ನುವ ಮಾತು ಕೇಳಿಬರುತ್ತದೆ. ಅದನ್ನು ಬಗೆಹರಿಸುವುದಕ್ಕೆ ನಮ್ಮ ಸರ್ಕಾರ ಸಮರ್ಥ ಇದೆ. ಆಂಧ್ರದ ಜಗಳ ಹುರುಳಿಲ್ಲದ್ದು ಎಂದು ನಮ್ಮ ಸರ್ಕಾರ ಅವರಿಗೆ ಹೇಳಿರಬಹುದು ಎಂದು ಭಾವಿಸುತ್ತೇನೆ. ಆದರೆ ಬಿಗಿಹಿಡಿದು ಈ ಬಗ್ಗೆ ಯೋಚನೆ ಮಾಡಬೇಕು. ಈ ಕಾರ್ಯ ಎಷ್ಟು ಬೇಗ ಪ್ರಾರಂಭವಾದರೆ ಅಷ್ಟು ಆಹಾರ ಉತ್ಪಾದನೆ ದೃಷ್ಟಿಯಿಂದ, ಈ ಕರ್ಣಾಟಕ ದೇಶ ಸ್ವಾವಲಂಬಿಯಾಗುತ್ತದೆ. ಮತ್ತು ಇನ್ನಷ್ಟು ಪ್ರಬಲವಾಗಿ, ಸತ್ವಯುತವಾಗಿ ಇಡೀ ದಕ್ಷಿಣ ಭಾರತಕ್ಕೆ ಒಂದು ಬೆಳೆಯುವ ಪ್ರದೇಶವಾಗುವ ಸಂಭವವಿದೆ. ಈ ನಾಲ್ಕು ಮಾತುಗಳನ್ನಾಡಿ ಈ ಗೊತ್ತುವಳಿಗೆ ಬೆಂಬಲಕೊಡುತ್ತಿದ್ದೇನೆ ಮತ್ತು ಅದೇ ರೀತಿಯಾಗಿ ನನ್ನ ಅಮೆಂಡ್‌ಮೆಂಟನ್ನೂ ನನ್ನ ಸ್ನೇಹಿತರಾದ ಶ್ರೀ ಆರ್. ಎಂ. ಪಾಟೀಲರು ಸ್ವೀಕಾರ ಮಾಡುತ್ತಾರೆಂದು ನಾನು ನಂಬುತ್ತೇನೆ.

5-30 P.M.

Sri R. M. PATIL.—I accept the amendment.

***Sri M. MALLIKARJUNASWAMY.**—Mr. Speaker and the hon'ble members of this House, it gives me great pleasure to speak on this resolution. In this context I would like to request Sri T. Subramanya, the Hon'ble Minister, to pay sufficient attention to the points that I am going to say on this resolution. The resolution reads thus:

> "This Assembly is of opinion that in order to prevent constantly recurring famine conditions in Dharwar District, particularly in Navalgund, Nargund and Soundatti areas, the Government should forthwith take up the implementation of the Malaprabha Project and Naviltirtha without waiting for its being included in the Third Five-Year Plan."

It is exactly at this juncture that I would like the resolution to be more comprehensive so as to include some other backward areas of the State like Hyderabad Karnatak. Here I say that in the case of an individual the wants are unlimited but resources are strictly limited. Therefore, we have got to make a wise choice as between several wants of the State and a priority has got to be fixed. Hence, this has been urged to be included in the Third Plan. The Hon'ble Member Sri R. M. Patil while speaking on this resolution expressed the sentiments in such a way that the hearts of every member were actually moved. I say here with all earnestness and with all goodwill that this project should be taken up with all earnestness as early as possible. I say that this project need not be asked to be included in the Third Plan. I requ st the Government to see that it is taken up immediately after April if the technical opinion and other things that are required to make the project feasible—if it is not feasible to make it feasible—are there. In this connection I wish to state that the Scheduled Tribes have been given special treatment by the Central Government. Likewise I tell you that Telangana has been classified as a backward area and special treatment is being accorded by the Central Government by earmarking crores of rupees to develop that backward area. I therefore request our Hon'ble Minister to sound a warning and to din into the ears of Sri B. D. Jatti who is a friend of Sri Morarji Desai. Let Sri B. D. Jatti make it a special case before the Government of India and see that Rs. 10 crores are allotted by the Government of India every year to develop these projects, whether they be in Bombay Karnatak or Hyderabad Karnatak. We must understand the significance here. As an economist I am saying this. I therefore request the Government to ask Sri B. D. Jatti to fly to Delhi immediately after his return from Belgaum and to make a request to the Central Government to give special treatment for the projects.

I do not like the Minister's idea of spending money over these projects in the under-developed areas out of the proceeds of the State of Mysore or from the coffers of the State of Mysore. It should not be included even in the Third Plan. Let us take it up with all earnestness and see that it is taken up this year alone by getting special grant and getting the area treated by the Government of India as a special area which needs to be given sufficient aid. As we all know, the magnitude of our country is such that we are not in a position to take up all the developmental activities in every aspect of life

by spending money. Proper allocation of resources has got to be made. I appreciate the points raised by my friend Sri R. M. Patil. The middle classes have almost taken to exodus and the villagers in those area are leading the population to the growing towns. Ours is an under-developed country. All areas have got to be treated on equal footing. No doubt there are areas like Mandya and other areas which are not undeveloped. But they are not forward and they are not well developed. The difference is one of degree and not of kind. If Rs. 22 crores has to be given out of the funds earmarked under the head of Major Irrigation in the Third Plan we will suffer. The various developmental activities in the other spheres will suffer. In this connection two places were selected for this purpose. In 1908 the Bombay Government made a survey and Khanapur and Navilthirtha were selected and they made it a feasible scheme. Now I am given to understand I had a talk with the engineers of our State—that this place is not a suitable one in spite of the fact that a technical opinion has been given in favour of this. A place four miles from the present place will be still more feasible, as the clay is not very strong. As an economist I am giving out the economies of this project. If we spend Rs. 22 crores three lakhs of acres will come under irrigation. Really we are going to be benefited if it is taken up. Let this be taken up but I request the Government not to invest even a naya paisa on this scheme. Let us demand from the Government of India. I am laying an emphatic emphasis by saying this once again.

In other areas also, if sufficient water facilities are given, we are going to raise wheat and cotton. We are not going to consume whatever we produce. The excess we will put in the market. I do not want to dwell on this subject any more. I once again request the Minister and the Government and especially the Leader of the House to see that this is taken up at the cost of the Government of India, by making out a case and convincing the Government of India to see that special treatment is accorded to this scheme and it is put into effect without delay.

ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರಾದಂಥ ಶ್ರೀ ಆರ್. ಎಂ. ಪಾಟೀಲ್ ಅವರು ತಂದಿರತಕ್ಕಂಥ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಡುತ್ತಾ ಮಲಪ್ರಭಾ ಯೋಜನೆಯ ವಿಷಯವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಲಬ್ಬಿಸುತ್ತೇನೆ. ಮೊದಲನೆಯದಾಗಿ ಶ್ರೀ ಆರ್. ಎಂ. ಪಾಟೀಲ್ ಅವರು ಹೇಳಿದ ಪ್ರಕಾರ ಎರಡು ವರ್ಷಕ್ಕೊಮ್ಮೆ ಈ ಪ್ರದೇಶದಲ್ಲಿ ಬರಗಾಲ ತಪ್ಪಿದ್ದಲ್ಲ. ದುಷ್ಕಾಳ ಇದ್ದು ಅನೇಕ ಜನರಿಗೆ ತೊಂದರೆ ಉಂಟಾಗಿ ತಮ್ಮ ಪ್ರದೇಶವನ್ನು ಬಿಟ್ಟು ಬೇರೆ ಒಳ್ಳೆಯ ಕಡೆ ಹೋಗುವ ಭಾವನೆ ಬರುತ್ತದೆ. ಈ ಬವಣೆಯನ್ನು ಎಷ್ಟು ಹೇಳಿದರೂ ತೀರಿದ ಮೋಕಾಗಿದೆ. ಉತ್ತಮವಾದಂಥ ಬ್ಲಾಕ್ ಕಾಟನ್ ಸಾಯಿಲ್, ಎರೆಭೂಮಿ ಇರುವುದರಿಂದ ಅಲ್ಲಿ ಉತ್ತಮವಾದ ಹತ್ತಿಯನ್ನು ಬೆಳೆಯುತ್ತಾರೆ, ಗೋಧಿಯನ್ನು ಬೆಳೆಯುತ್ತಾರೆ. ಇದೂ ಅಲ್ಲದೆ ಜೋಳ ಅನೇಕ ಕಡೆ ಹೇರಳವಾಗಿ ಬೆಳೆದು ದೊಡ್ಡ ಕಣಜವಾಗುವಂಥ ಭೂಮಿ ಅಲ್ಲಿದೆ. ಅದನ್ನು ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಹೋಗಿ ನೋಡಬೇಕು. ಆ ಭೂಮಿಯನ್ನು ನೋಡಿದರೆ ಆ ಕೆಲಸ ಮೊದಲು ಆಗಬೇಕು, ಅದನ್ನು ಇನ್ನೂ ಹೆಚ್ಚು ತ್ವರಿತವಾಗಿ ಮಾಡಬೇಕು ಎಂದು ಆಶೆಮಾಡುತ್ತಾರೆ ಎಂದು ನಾನು ಹೇಳುತ್ತೇನೆ. ನಾನು ಮೈಸೂರಿನಲ್ಲಿ ಅನೇಕ ಕಡೆ ಅಡ್ಡಾಡಿ ನೋಡಿದ್ದೇನೆ. ಎಷ್ಟೋ ಕಡೆ ಕಾಡು ಇದೆ. ಅದರಲ್ಲಿ ಪೀಕು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಉತ್ತಮವಾದ ಸಫಲವಾದ ಭೂಮಿ ಇದೆ. ಅದಕ್ಕೆ ನೀರು ಇಲ್ಲದೆ ಬರಗಾಲದಿಂದ ಪೀಡಿತರಾದವರಿಗೆ ಏನೂ ಪೀಕು ಆಗದಂತೆ ಇದೆ. ಆ ಪ್ರದೇಶದಲ್ಲಿ ನೀರಾವರಿ ಆಗತಕ್ಕದ್ದು ಇದೆ. ಅದು ತ್ವರಿತವಾಗಿ ಆಗಬೇಕು. 1906 ರಿಂದ ಮಲಪ್ರಭಾ ಯೋಜನೆಯನ್ನು ಅನೇಕ ಪ್ರದೇಶಗಳಲ್ಲಿ ಇನ್‌ವೆಸ್ಟಿಗೇಷನ್ ಮಾಡಿ ಕೊನೆಗೆ ನವಿಲುತೀರ್ಥದಲ್ಲಿ ಮಾಡಬೇಕೆಂದು ಯೋಜನೆಯನ್ನು ಸಿದ್ಧಪಡಿಸಿಟ್ಟಿದ್ದಾರೆ. ಇದರಿಂದ ನರಗಂದ್, ರೋಣ, ಹುಬ್ಬಳ್ಳಿ, ರಾಮದುರ್ಗ, ಬಾದಾಮಿ ಈ ಪ್ರದೇಶಗಳಲ್ಲಿ 3 ಲಕ್ಷ ಎಕರೆ ಭೂಮಿ ನೀರಾವರಿ ಆಗುತ್ತದೆ. ಇದರಿಂದ ಬಹಳ ಉತ್ತಮವಾದಂತ ಬ್ಲಾಕ್ ಕಾಟನ್ ಸಾಯಿಲ್ ಭೂಮಿಗೆ ನೀರು ಕೊಡಿಸಿದರೆ ಉತ್ತಮವಾದ ಪೀಕು ಉತ್ಪನ್ನ ಆಗುವುದಕ್ಕೆ ಸಾಧ್ಯವಿದೆ. ಇದನ್ನು ಮೊದಲು ಮುಂಬೈ ಗೌರ್ನಮೆಂಟಿನವರು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರ್ಪಡೆಮಾಡಿದ್ದರು. ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಮೀಸಲಾಗಿ ಇಟ್ಟಿದ್ದರು. ಕೇಂದ್ರ ಸರ್ಕಾರದವರು ಇಲ್ಲದ ಸಲ್ಲದ ನೆವ ಹಾಕಿ, ಫಾರಿನ್ ಎಕ್ಸ್‌ಚೇಂಜ್-ವಿದೇಶ ವಿನಿಮಯ ಸಿಕ್ಕುವುದಿಲ್ಲ ಎಂದು ಹೇಳಿದರು. ಫಾರಿನ್ ಎಕ್ಸ್‌ಚೇಂಜಿಗೆ ಜರೂರಾಗಿ ಎಲ್ಲಾ ತೀವ್ರವಾದ ಕಾರ್ಯಕ್ರಮವನ್ನ ಮಾಡಬೇಕು. ತೀವ್ರವಾಗಿ ಕ್ರಮ ತೆಗೆದುಕೊಂಡರೆ ಬರಗಾಲ ಪೀಡಿತವಾದ ಪ್ರದೇಶಕ್ಕೆ ಉತ್ತಮವಾದ ನೀರಾವರಿ ಯೋಜನೆಯಾಗಿ ಹೆಚ್ಚು ಆಹಾರ ಧಾನ್ಯಗಳು ಬೆಳೆಯುತ್ತವೆ, ಎನ್ನುವ ಮಾತು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿದರೂ ಈಗ ಮತ್ತೊಮ್ಮೆ ಮುಂದೆ ಹಾಕಿದ್ದಾರೆ, ಕೃಷ್ಣಾ ನದಿಯ ನೀರು ಸರಿಯಾಗಿ ಹಂಚಿಕೆಯಾಗಿಲ್ಲ. ಸಾಕಷ್ಟು ನೀರು ಉಳಿದಿದೆ. ಮುಂಬೈ ಮತ್ತು ಮೈಸೂರು ಸರ್ಕಾರಗಳ ನಡುವೆ ಒಂದು ತೀರ್ಮಾನವನ್ನು ಕೈಗೊಂಡು ಅಲ್ಲಿಯ

(ಶ್ರೀ ಎ. ಎಸ್. ಪಾಟೀಲ್)

ನೀರನ್ನು ಹಂಚಿಕೊಂಡಮೇಲೆ ಈ ಯೋಜನೆಯನ್ನು ಕಾರ್ಯಗತ ಮಾಡುವುದು ಅನುಕೂಲವಿದೆ ಎಂದು ಹೇಳುತ್ತಾರೆ. ಹಾಗೆ ಕಾಯದೆ ಸರ್ಕಾರದವರು ಇದನ್ನು ತ್ವರಿತವಾಗಿ ಮಾಡಬೇಕು ಎಂದು ಹೇಳುತ್ತೇನೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಹೇಳಿದಂತೆ ಇದರ ಬಗ್ಗೆ ಕೇಂದ್ರ ಸರ್ಕಾರದವರ ಮನಸ್ಸು ಬೀಳುವಂತೆಮಾಡಿ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದು ಮೊದಲನೆಯ ಮಾತು. ಈ ಮಾತನ್ನು ಹೇಳಬೇಕಾದರೆ ಈ ಯೋಜನೆಗೆ ರಾಜ್ಯ ಸರ್ಕಾರದವರು ಎಷ್ಟು ಕೊಡಬೇಕು, ಕೇಂದ್ರ ಸರ್ಕಾರದವರು ಎಷ್ಟು ಕೊಡಬೇಕು ಎನ್ನುವುದೂ ಗೊತ್ತಿದ್ದ ಮಾತು ಇದೆ. ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಇದು ಅನ್‌ಡೆವಲಪ್ಡ್ ಏರಿಯಾ. ಇದಕ್ಕೆ ಕೇಂದ್ರ ಸರ್ಕಾರದವರು ಹೆಚ್ಚು ಕೊಡುವಂತೆಮಾಡಬೇಕು ಎಂದು ಹೇಳಿದರು. ರಾಜ್ಯ ಸರ್ಕಾರದವರು ಇದಕ್ಕೆ ಹಣ ಮೊದಲು ಕೊಟ್ಟರೂ ಆಮೇಲೆ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬಹುದು. ಅದರ ಬಗ್ಗೆ ವಿಶದವಾಗಿ ಹೇಳುವುದು ಜರೂರು ಇಲ್ಲ ಎನಿಸುತ್ತದೆ. ಇನ್ನು ಎರಡನೆಯ ಮಾತು ಏನು ಎಂದರೆ ನವಿಲಗುಂದ, ನರಗುಂದ್, ಸೌಂದತ್ತಿ, ರೋಣ, ಬಾದಾಮಿ ಈ ಪ್ರದೇಶದಲ್ಲಿ ಆರ್. ಎಂ. ಪಾಟೀಲರು ಹೇಳಿದ ಹಾಗೆ ಈವರೆವಿಗೂ ಸಹ ಉಗ್ರವಾದ ಬರಗಾಲ ಇದೆ. ಈ ಬರಗಾಲದಿಂದ ಪೀಡಿತವಾದ ಪ್ರದೇಶ ಏನಿದೆ ಅಲ್ಲಿ ಜನಗಳಿಗೆ ಕುಡಿಯುವುದಕ್ಕೆ ಒಂದು ತೊಟ್ಟು ನೀರೂ ಸಹ ಇಲ್ಲದೆ, ಗುಳೆಕಟ್ಟಿಕೊಂಡು 500, 600, 700 ಜನ ಬೇರೆಕಡೆ ಹೋಗಿದ್ದಾರೆ. ಇಷ್ಟು ತ್ರಾಸಿನೊಳಗೆ ತೊಂದರೆಪಡುವ ಪ್ರದೇಶ ಇದು. ಕೇಂದ್ರ ಸರ್ಕಾರದವರು ನೇಮಿಸಿದ್ದ ರಾಮಮೂರ್ತಿ ಕಮಿಟಿಯವರೂ ಸಹ ಈ ಯೋಜನೆಯನ್ನು ತೀವ್ರವಾಗಿ ಕಾರ್ಯಗತಮಾಡಬೇಕು, ಈ ನೀರಾವರಿ ಯೋಜನೆಯು ಬರಗಾಲ ಪೀಡಿತ ಪ್ರದೇಶಕ್ಕೆ ಉಪಯುಕ್ತವಾದದ್ದು, ಅನ್‌ಡೆವಲಪ್ಡ್ ಏರಿಯಾದ ಬೆಳವಣಿಗೆ ಆಗುವ ಅವಕಾಶ ಇದೆ, ಈ ನೀರಾವರಿ ಯೋಜನೆಯನ್ನು ತೀವ್ರವಾಗಿ ಸರ್ಕಾರದವರು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು, ತಮ್ಮ ರಿಪೋರ್ಟಿನಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಆದರೂ ಅದು ಹಾಗೆಯೇ ಉಳಿದಿದೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಆಗದೆ ಇದ್ದರೂ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರ್ಪಡೆಮಾಡಿ ಕಾರ್ಯಗತಮಾಡಬೇಕು. ಎಲ್ಲಾ ಸರ್ವೆ ಆಗಿದೆ. ಇನ್‌ವೆಸ್ಟಿಗೇಷನ್ ಮುಗಿದಿದೆ. ಒಂದೆರಡು ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟು ತೀವ್ರವಾಗಿ ಕಾರ್ಯಗತಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ ಇದೆ. ಆರೀತಿ ಮಾಡಬೇಕು ಎಂದು ನಾನು ಆಶೆಮಾಡುತ್ತೇನೆ. ನಮ್ಮ ಸರ್ಕಾರದವರೂ ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲೇ ಕಾರ್ಯಗತಮಾಡಲು ಎಲ್ಲಾ ಪ್ರಯತ್ನವನ್ನು ಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಇದೂ ಅಲ್ಲದೆ ಕೃಷ್ಣಾನದಿ ನೀರನ್ನು ನೊಳಗೆ ಹಂಚಿಕೆ ಜರೂರು ಇಲ್ಲ. ಸಾಕಷ್ಟು ನೀರನ್ನು ಮೀಸಲಾಗಿ ಇಟ್ಟು ಬಾಕಿನೀರಿನ ಸಂಗ್ರಹಣೆ ಏನು ಇದೆ ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎಂದು ಸೂಚನೆಮಾಡುತ್ತೇನೆ. ಇಷ್ಟು ಹೇಳಿ ನಮ್ಮ ಮಾನ್ಯ ಮಿತ್ರರಾದ ಶ್ರೀ ಆರ್. ಎಂ. ಪಾಟೀಲ್ ಅವರು ತಂದಿರತಕ್ಕಂಥ ನಿರ್ಣಯಕ್ಕೆ ಪೂರ್ಣ ಬೆಂಬಲಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀಮಾನ್ ಆರ್. ಎಂ. ಪಾಟೀಲ್ ಅವರು ನಮ್ಮ ಮುಂದೆ ಮಂಡಿಸಿರುವ ಈ ಠರಾವಿಗೆ ನನ್ನ ಅನುಮೋದನೆಯನ್ನು ಕೊಡುತ್ತಾ ಈ ವಿಷಯದಲ್ಲಿ ಶ್ರೀಮಾನ್ ಜಿ. ಶಿವಪ್ಪನವರು ಮತ್ತು ಮಲ್ಲಿಕಾರ್ಜುನಸ್ವಾಮಿ ಅವರು ಈ ಸ್ಕೀಮು ಯಾವ ಜಿಲ್ಲೆಗೆ ಫಾಯ್ದೆ ಆಗುತ್ತದೋ ಆ ಜಿಲ್ಲೆಯ ಹೊರಗಿನವರಾದರೂ ಇದಕ್ಕೆ ಅನುಮೋದನೆಯನ್ನು ಕೊಟ್ಟಿದ್ದು ನೋಡಿ ನಾನು ಅವರಿಗೆ ನನ್ನ ಅಭಿವಂದನೆಗಳನ್ನು ಅರ್ಪಿಸುತ್ತೇನೆ. ಈಗ ಎರಡು ವರ್ಷಗಳ ಹಿಂದೆ ನಾನು ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲೂ ತಿರುಗಾಡುವ ಒಂದು ಪ್ರಸಂಗ ಬಂದಿತ್ತು. ಆಗ ಕಾವೇರಿ ನದಿಯಿಂದ ಮಂಡ್ಯಾ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗಳಲ್ಲಿ ನೀರಾವರಿ ಆಗಿ ಜನತೆ ಎಷ್ಟು ಕಲ್ಯಾಣ ಹೊಂದಿದೆ, ಜನತೆಯ ಕಲ್ಯಾಣ ಬಯಸುವಂಥ ಸರ್ಕಾರ ಜನತೆಯ ಹಿತದೃಷ್ಟಿಯಿಂದ ಮತ್ತು ಹೆಚ್ಚು ಧಾನ್ಯ ಉತ್ಪನ್ನವಾಗಬೇಕೆಂಬ ದೃಷ್ಟಿಯಿಂದ ಎಷ್ಟು ಕೆಲಸವನ್ನು ಮಾಡಬಲ್ಲದು, ಮತ್ತು ಹಳೇ ಮೈಸೂರು ಸರ್ಕಾರ ಮಹಾರಾಜರ ಕಾಲದಲ್ಲಿ ಎಷ್ಟು ಜನರಿಗೆ ಕಲ್ಯಾಣಮಾಡಿದೆ, ನೀರಾವರಿ ಯೋಜನೆಯಿಂದ ಹಳೇ ಮೈಸೂರು ಸಂಸ್ಥಾನದವರು ಎಷ್ಟು ಇದರಿಂದ ಫಾಯ್ದೆಪಡೆದುಕೊಂಡಿದ್ದಾರೆ ಎಂಬುದು ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟುಮಾಡಿತು. ನಾನು ಧಾರವಾಡ ಜಿಲ್ಲೆಯಿಂದ ಬಂದವನು ಧಾರವಾಡ, ಬೆಳಗಾಂ ಮತ್ತು ಬಿಜಾಪುರ ಈ ಮೂರು ಜಿಲ್ಲೆಗಳು ಮತ್ತು ಹೈದರಾಬಾದು ಭಾಗದ ಜಿಲ್ಲೆಗಳ ಪರಿಸ್ಥಿತಿ ಈ ಹಳೇ ಮೈಸೂರು ಭಾಗದ ಪರಿಸ್ಥಿತಿಯಿಂದ ಬಹುಮಟ್ಟಿಗೆ ಬೇರೆಯಾಗಿದೆ ಎಂಬುದನ್ನು ನಾನು ಕಂಡುಕೊಂಡೆ. ಉತ್ತರ ಕರ್ನಾಟಕದ ಈ 3 ಜಿಲ್ಲೆಗಳು ಕುಡಿಯುವ ನೀರಿನ ಅಭಾವ ಮತ್ತು ಮಳೆಯ ಅಭಾವ ಇದರಿಂದ ಮೇಲಿಂದ ಮೇಲೆ ದುರ್ಭಿಕ್ಷಕ್ಕೆ ಒಳಗಾಗುತ್ತಿವೆ. ಹಳೇ ಮೈಸೂರು ಭಾಗದಲ್ಲಿ ಅನೇಕ ಗ್ರಾಮಗಳಲ್ಲಿ ಅಥವಾ ಅನೇಕ ಜಿಲ್ಲೆಗಳಲ್ಲಿ ಮಳೆ ಅಭಾವ ಇಲ್ಲದೇ ಕುಡಿಯುವ ನೀರಿನ ತೊಂದರೆಗೆ ಈಡಾಗದೇ ಇರಬಹುದು. ಆದರೆ ಉತ್ತರ ಕರ್ನಾಟಕದ ಈ ಮೂರು ಜಿಲ್ಲೆಗಳ ಪರಿಸ್ಥಿತಿ ಹೇಗಿದೆ ಎಂದರೆ ಅಲ್ಲಿ ಬಾವಿ ತೆಗೆದರೂ ಸಹ ನೀರು ಸಿಕ್ಕುವುದಿಲ್ಲ. ಸಿಕ್ಕಿದರೂ ಸಿಹಿನೀರು ಸಿಕ್ಕುವುದು ಬಹಳ ವಿರಳ, ಸವಳು ನೀರು. ಹೀಗಿದ್ದು ಈ ಮೂರು ಜಿಲ್ಲೆಗಳಲ್ಲಿ ಅನೇಕ ಶತಮಾನದಿಂದ ನೀರಿನ ಅಭಾವದಿಂದ ನರಳುತ್ತಾ ಇದ್ದಾರೆ ಮತ್ತು ತೊಂದರೆಗೆ ಈಡಾದದ್ದೂ ಉಂಟು. ದೇಶಕ್ಕೆ ಸ್ವಾತಂತ್ರ್ಯ ದೊರಕಿದ ಮೇಲೆ ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರಗಳು ಆಹಾರದ ಅಭಾವವನ್ನು ಹೋಗಲಾಡಿಸಲು ಅಲ್ಲಲ್ಲಿ ನೀರಾವರಿ ಯೋಜನೆಗಳನ್ನು ಮಾಡಿದ್ದರಿಂದ ದೇಶದ ಅನೇಕ ಭಾಗಗಳಲ್ಲಿ ಅದರ ಫಾಯ್ದೆಯಿಂದಾಗಿ ಕಲ್ಯಾಣವನ್ನು ಅನುಭವಿಸುವಂಥ ಪ್ರಸಂಗ ಬಂದದ್ದು ಉಂಟು. ಆದರೆ ಬಿಜಾಪುರ, ಧಾರವಾಡ ಜಿಲ್ಲೆಗಳ ಆ ಜನತೆ ಸರ್ಕಾರದವರು ಮಾಡುವಂಥ ಈ ಕಲ್ಯಾಣದ ಕೆಲಸವನ್ನು ಇದುವರೆಗೂ ನೋಡುವಂತಾಗಿಲ್ಲ. ಅದರಿಂದಾಗಿ ಅಲ್ಲಿನ ಜನರ ಆತುರತೆಯೂ ಕೂಡ ದಿನಂ ಪ್ರತಿ ಹೆಚ್ಚುತ್ತಾ ಇದೆ. ಹಾಗಿರುವಾಗ ಈ ಮಲಪ್ರಭಾ ಯೋಜನೆಯನ್ನು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಏಕೆ ಹಾಕಿದ್ದಾರೆ? ಇದನ್ನು 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಏಕೆ ಕೂಡಲೆ ತೆಗೆದುಕೊಳ್ಳಬಾರದು ಎಂದು ಜನತೆಯ ಆತುರತೆ ದಿನಂ ಪ್ರತಿ ಈ ಸಭೆಯ ಸದಸ್ಯರಮೇಲೆ ಬಹಳ ಒತ್ತಾಯಪೂರ್ವಕ

ವಾಗಿ ಬರಲಿಕ್ಕೆ ಹತ್ತಿದೆ. ಮಲಪ್ರಭಾ ಯೋಜನೆಯಿಂದ ಫಾಯ್ದೆ ಆಗುವಂಥ ಪ್ರದೇಶ ಯಾವಾಗಲೂ ಬರಗಾಲಕ್ಕೆ ಈಡಾಗುವಂಥ ಪ್ರದೇಶ ಇದ್ದು, ಆ ಜನರಿಗೆ ಆಗುವಂಥ ತೊಂದರೆಯನ್ನು ತಪ್ಪಿಸಿಕೊಳ್ಳುವುದರ ಸಲುವಾಗಿ ಈ ಯೋಜನೆಯನ್ನು ಆದಷ್ಟು ಕೂಡಲೇ ತೆಗೆದುಕೊಳ್ಳಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಸರ್ಕಾರದಮೇಲೆ ಒತ್ತಾಯತರುತ್ತಾ ಇದ್ದಾರೆ. ಆದ್ದರಿಂದ ನಾನು ಈ ದಿವಸ ನಮ್ಮ ಸರ್ಕಾರಕ್ಕೆ ಬನ್ನಹ ಮಾಡಿಕೊಳ್ಳುವುದೇನೆಂದರೆ ಶ್ರೀಮಾನ್ ಆರ್. ಎಂ. ಪಾಟೀಲ್ ಅವರ ಈ ಠರಾವಿಗೆ ಯಾವ ತರಹದ ಆತಂಕಗಳೂ ಬರದಂತೆಮಾಡಿ, ಕೇಂದ್ರ ಸರ್ಕಾರದಿಂದ ಯಾವರೀತಿ ಒಪ್ಪಿಗೆ ಮತ್ತು ಟೆಕ್ನಿಕಲ್ ಅಥವಾ ಫೈನಾನ್ಷಿಯಲ್ help ಬೇಕೋ ಅದನ್ನು ತೆಗೆದುಕೊಂಡು ಈ ಯೋಜನೆಯನ್ನು ಆದಷ್ಟು ಕೂಡಲೇ 2ನೇ ಪಂಚವಾರ್ಷಿಕ ಯೋಜನೆಯಲ್ಲೇ ಕಾರ್ಯಗತಮಾಡಲು ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ ಮತ್ತು ಈ ಠರಾವಿಗೆ ಬೆಂಬಲಕೊಡುತ್ತೇನೆ.

ಶ್ರೀ ಪಿ. ಜಿ. ಸಿದ್ಧಾಂತಿ (ಬಿಜಾಪುರ).—ಸ್ವಾಮಿ, ಈಗ ಈ ಸಭೆಯ ಮುಂದೆ ಇದ್ದಂಥ ಗೊತ್ತುವಳಿಗೆ ನನ್ನ ಮನ್ನಣೆಯನ್ನು ಕೊಡಲಿಕ್ಕೆ ಬಹಳ ಆನಂದವಾಗುತ್ತದೆ. ನಾನು ಕ್ಷಾಮ ಪ್ರದೇಶದಿಂದ ಬಂದವನು. ಕ್ಷಾಮ ಪ್ರದೇಶಕ್ಕೆ ನೀರಿನ ಅನುಕೂಲಮಾಡಿಕೊಡತಕ್ಕ ಈ ಯೋಜನೆಯನ್ನು ತೆಗೆದುಕೊಳ್ಳಿರಿ ಎಂದು ಅನ್ನಲಿಕ್ಕೆ ಮತ್ತು ಒತ್ತಾಯ ಮಾಡಲಿಕ್ಕೆ ನನಗೆ ಬಹಳ ಆನಂದವಾಗುತ್ತದೆ. ಬಿಜಾಪುರ, ಧಾರವಾಡ ಮತ್ತು ಬೆಳಗಾಂ ಈ ಮೂರು ಜಿಲ್ಲೆಗಳ ಅಜಮಾಯಿಷಿ 10 ಸಾವಿರ ಚದುರ ಮೈಲಿ ಕ್ಷಾಮ ಪ್ರದೇಶ, ಇದರಲ್ಲಿ ನೀರು ಸಿಕ್ಕುವುದು ಬಹಳ ಕಠಿಣ ಇದೆ. ಅಂಥಾದ್ದರಲ್ಲಿ ಈ ಮಲಪ್ರಭಾ ಯೋಜನೆ ಏನಿದೆ ಇದರಿಂದ ಕನಿಷ್ಠ 3 ಲಕ್ಷ ಎಕರೆಗೆ ನೀರು ಒದಗತಕ್ಕ ಪ್ರಸಂಗ ಇದೆ. ಇದನ್ನು ತೆಗೆದುಕೊಳ್ಳಿರಿ ಎಂದು ಹೇಳುವಂಥಾದ್ದು ಏನಿದೆ ಅದಕ್ಕೆ ಬೆಂಬಲ ಕೊಡಲು ಆನಂದವಾಗುತ್ತದೆ. ಆ ಪ್ರದೇಶದಲ್ಲಿ ಎರಡುಸಾರಿ, ಮೂರುಸಾರಿ ನೀರು ಕೊಟ್ಟರೆ ಈಗ ಏನು ಬೆಳೆ ಬೆಳೆಯುತ್ತಾರೆ ಅದಕ್ಕೆ 3—4 ಪಟ್ಟು ಬೆಳೆ ಹೆಚ್ಚು ಬರುತ್ತದೆ. ಸರ್ಕಾರದ ತಜ್ಞರೇನು ಇದ್ದಾರೆ ಅವರ ಅಂದಾಜ ಪ್ರಕಾರ 3 ಲಕ್ಷ ಎಕರೆಯಲ್ಲಿ 90 ಸಾವಿರ ಟನ್ ಆಹಾರ ಧಾನ್ಯ ಬೆಳೆಯಬಹುದು ಎಂದು ಗೊತ್ತಾಗಿದೆ. ಅಂಥಾ ಭೂಮಿಗೆ ನೀರು ಕೊಡಲಿಕ್ಕೆ ಏಕೆ ತಡಮಾಡುತ್ತೀರಿ ಎಂದು ಸರ್ಕಾರದವರನ್ನು ಕೇಳುತ್ತೇನೆ.

ಈ ಮಲಪ್ರಭಾ ಯೋಜನೆಯನ್ನು ಈಗಲೇ ತೆಗೆದುಕೊಳ್ಳಿರಿ ಎಂದು ಒತ್ತಾಯಮಾಡಲಿಕ್ಕೆ ಇನ್ನೊಂದು ಕಾರಣ-ಇದರಂಥ ಸೋವಿ ಯೋಜನೆ ಮತ್ತೊಂದು ಇಲ್ಲ. ಇದರಲ್ಲಿ 25 ಸಾವಿರ ಎಕರೆ ಮುಳುಗಡೆ ಪ್ರದೇಶ ಇದೆ. 3 ಲಕ್ಷ ಎಕರೆಗೆ ನೀರು ಸರಬರಾಯಿ ಆಗುತ್ತದೆ ಎಂದಮೇಲೆ 12 ಪಟ್ಟು ನೀರಾವರಿ ಆಗುತ್ತದೆ ಎಂದ ಹಾಗಾಯಿತು.

ಎರಡನೆಯದಾಗಿ ಇದನ್ನು ತೀವ್ರ ತೆಗೆದುಕೊಳ್ಳಲಿಕ್ಕೇಬೇಕು ಎನ್ನಲಿಕ್ಕೆ ಕಾರಣ ಇದರ ಎಸ್ಟಿಮೇಟ್ ಮಾಡಿದಾಗ 15 ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದರು. ಇವತ್ತಿನ ದಿವಸ 22 ಕೋಟಿ ರೂಪಾಯಿ ಆಗುತ್ತದೆ. ಹೀಗೇ ನಿಧಾನಮಾಡುತ್ತಾ ಹೋದರೆ 22 ಕೋಟಿ ಎನ್ನುವುದು 27—28 ಕೋಟಿ ರೂಪಾಯಿ ಆಗಬಹುದು. ಆದಕಾರಣ ತೀವ್ರ ತೆಗೆದುಕೊಳ್ಳಿರಿ. ಅಂದರೆ ಬರೋಬರಿ ಆಗುತ್ತದೆ ಇನ್ನೊಂದು ವಿಷಯ ಎಂದರೆ ನಮ್ಮ ಸರ್ಕಾರದವರು ಏನುಮಾಡುತ್ತಾರೆ—ಇದು ನಮ್ಮ ಕೈಯಲ್ಲಿಲ್ಲ ಭಾರತ ಸರ್ಕಾರದವರು ಪರವಾನಗಿ ಕೊಡಬೇಕು, ನಮ್ಮ ಪರವಾನಗಿ ಕೊಡಬೇಕು ಎಂದು ಹೇಳುತ್ತಾರೆ. 22 ಕೋಟಿ ರೂಪಾಯಿ ಖರ್ಚಾಗುವಾಗ ಭಾರತ ಸರ್ಕಾರದವರು ಸಾಲಕೊಡಬೇಕಾಗುತ್ತದೆ. ಇದು ಬರೋಬರಿ ಇದೆ. ಆದರೆ ಇದನ್ನು ಈಗಲೇ ಷುರುಮಾಡಿದ್ದೇ ಆದರೆ ಮುಂದೆ ಹೆಚ್ಚು ಖರ್ಚಾಗಬಹುದಾದ್ದರಲ್ಲಿ ಸ್ವಲ್ಪವಾದರೂ ಕಡಿಮೆ ಬೀಳಲಿಕ್ಕೆ ಅವಕಾಶವಾಗುತ್ತದೆ. ಮುಂದೆ 4-5 ಲಕ್ಷ ರೂಪಾಯಿಗಳಷ್ಟಾದರೂ ಕಡಿಮೆಬೀಳಬಹುದು ಎಂದು ಹೇಳಬಲ್ಲೆ.

Mr. CHAIRMAN.—You may continue your speech to-morrow. The House now rises and will meet to-morrow at 3 P.M.

The House adjourned at Six of the Clock to meet again at Three of the Clock on Thursday, the 7th April 1960.